CC-O. In Public Domain. Digitized by eGangotri

ಕರ್ನಾಟಕದ ಸ್ವಾತಂತ್ರ್ಯ ಹೋರಾಟ

ಡಾ.ಕೆ.ರಾಜೇಗೌಡ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

435

ಕರ್ನಾಟಕದ ವ್ಯವಸಾಯ ಪದ್ಧತಿ

ಹ. ಕ. ರಾಜೇಗೌಡ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು–560 009

Sri Vidyabharathi Book Centre, Sringeri

CC-O. In Public Domain. Digitized by eGangotri

KARNATAKADA VYAVASAYA PADHATHI – a monograph on the Agriculteral Practices in Karnataka written in Kannada by H. K. Rajegowda and Published by G. K. Ananthram IBH Prakashana Gandhinagar Bangalore 560 009.

ಬೆಲೆ : ರೂ. 2.00

Copyright © 1981 by the Publisher

ಮುಖಪುಟ : ಮನೋಹರ್

ಮೊದಲ ಮುದ್ರಣ : 1981 ಪ್ರಕಾಶಕರು : ಜಿ. ಕೆ. ಅನಂತರಾಮ್ ಐಬಿಎಚ್ ಪ್ರಕಾಶನ 5ನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009 ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054

Paper used for printing this book was made available by the Government of India at concessional rate.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಚೀನ ಪದ್ಧತಿ

ನಮ್ಮ ಭಾರತ ಪ್ರಧಾನವಾಗಿ ವ್ಯವಸಾಯದ ರಾಷ್ಟ್ರ. ಈ ವ್ಯವಸಾಯ ಎಂದು ಆರಂಭವಾಯಿತೆಂದು ನಿಖರವಾಗಿ ಹೇಳಲು ಬರುವುದಿಲ್ಲ. ಮಾನವ ಗೆಡ್ಡೆ ಗೆಣಸುಗಳನ್ನು, ಪ್ರಾಣಿ ಗಳ ಹಸಿ ಮಾಂಸವನ್ನೂ ತಿನ್ನುತ್ತಿದ್ದನಂತೆ. ಆಗ ಆವನ ವಾಸ ಗುಹೆಗಳಲ್ಲಿ. ಮರದ ಎಲೆ ಮತ್ತು ತೊಗಟೆಗಳೇ ಅವನ ಉಡುಪು. ಬೆಂಕಿಯನ್ನು ಕಂಡುಹಿಡಿದ ಮೇಲೆ ಗೆಡ್ಡೆಗೆಣಸು ಮತ್ತು ಮಾಂಸವನ್ನು ಬೇಯಿಸಿ ತಿನ್ನಲಾರಂಭಿಸಿದ. ಇದರಿಂದ ಅವನಿಗೆ ರುಚಿಯ ಪರಿಚಯವಾಯಿತು. ಭೂಮಿಯು ಒಳಗೆ ಬೆಳೆಯುವ ಬೆಳೆಗಳನ್ನು ಬಿಟ್ಟು ಭೂಮಿಯ ಮೇಲೆ ಬೆಳೆಯುವು ದನ್ನು ಕಂಡುಕೊಂಡಂತೆ ಕಾಣುತ್ತದೆ. ಅವು ಧಾನ್ಯರೂಪ ದಲ್ಲಿದ್ದುವು. ಅವನ್ನು ತಾವೇ ಬೆಳೆಸುವ ಪ್ರಯೋಗಗಳನ್ನು ರೂಢಿಸಿಕೊಂಡಿರಬೇಕು.

ವ್ಯವಸಾಯ ನಮ್ಮ ದೇಶದ ಬೆನ್ನೆಲುಬು. ದೇಹ ನೆಟ್ಟಗೆ ನಿಲ್ಲಲು ಬೆನ್ನೆಲುಬು ಮುಖ್ಯ. ಹಾಗೆಯೇ ನಮ್ಮ ವ್ಯವಸಾಯ ನೆಟ್ಟಗೆ ಇದ್ದರೆ ಮಾತ್ರ ನಮ್ಮ ದೇಶ ನೆಟ್ಟಗಿರುತ್ತದೆ. ಅದು ಕುಂಟಿದರೆ ದೇಶದ ಪ್ರಗತಿಯೂ ಕುಂಟುತ್ತದೆ. ನಮ್ಮ ದೇಶದ ಯೋಜನೆಗಳೆಲ್ಲವೂ ವ್ಯವಸಾಯದ ಹಿನ್ನೆಲೆಯಲ್ಲಿಯೇ ರೂಪಿತ ವಾಗುತ್ತವೆ. ಇಂದಿಗೂ ಸಹ ಭಾರತದ ಜನಸಂಖ್ಯೆಯಲ್ಲಿ ನೂರಕ್ಕೆ ಎಪ್ಪತ್ತೈದು ಜನ ವ್ಯವಸಾಯದಿಂದಲೇ ಜೀವಿಸುತ್ತಾರೆ. ಕಾಡಿನಿಂದ ನಾಡಿಗೆ ಬಂದ ಮಾನವ ಇದನ್ನು ಕ್ರಮವಾಗಿ ಬೆಳೆಸಿಕೊಂಡು ಬಂದಿದ್ದಾನೆ. ಮೊದಲು ಕಡ್ಡಿಗಳಿಂದ ಕೆರೆದು

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂಮಿಯಲ್ಲಿ ಬೀಜ ಹಾಕಿ ನಮ್ಮ ವ್ಯವಸಾಯ ಪದ್ಧತಿಯನ್ನು ಪ್ರಾರಂಭಿಸಿದ. ಆವನೇ ಇಂದು ವಿಮಾನದಿಂದ ಬೀಜ ಚೆಲ್ಲುವ ಮಟ್ಟಿ ತಲುಪಿದ್ದಾನೆ. ಈಗಲೂ ನಮ್ಮಲ್ಲಿ ಪರಂಪರೆಯಿಂದ ಬಂದ ವ್ಯವಸಾಯ ಪದ್ಧತಿಯೇ ಪ್ರಧಾನವಾಗಿದೆ. ಪಾಶ್ಚಿಮಾತ್ಯ ಪದ್ಧತಿಯೂ ಬೇರುಬಿಡಲು ಯತ್ನಿಸುತ್ತಿದೆ. ಹೀಗಾಗಿ ಎಲ್ಲ ರೀತಿಯ ವ್ಯವಸಾಯ ಪದ್ಧತಿಗಳನ್ನೂ ನಮ್ಮ ದೇಶದಲ್ಲಿ ಕಾಣ ಬಹುದು. ಕರ್ನಾಟಕದ ಕಾಡುಕುರುಬರು, ಜೇನು ಕುರುಬರು, ಸೋಲಿಗರು ಮುಂತಾದ ಜನಾಂಗದವರು ಕಾಡುಮೇಡುಗಳಲ್ಲಿ ವಾಸಮಾಡುತ್ತಾರೆ. ಅವರು ಇಂದಿಗೂ ಕಾಡಿನ ಮಧ್ಯೆ ಅಗೆದು ಕೆದಕಿ ಬೀಜಗಳನ್ನು ಬಿತ್ತಿ ಬೆಳೆಯುವ ಪ್ರಾಚೀನ ಪದ್ಧತಿಯನ್ನೇ ಅನುಸರಿಸುತ್ತಾರೆ.

1970ರ ಜನಗಣತಿಯ ಪ್ರಕಾರ ದಕ್ಷಿಣ ಭಾರತದಲ್ಲಿ ಶೇಕಡ 75.69 ಜನ ವ್ಯವಸಾಯ ನಿರತರಾಗಿದ್ದಾರೆ. ಇನ್ನು ಉಳಿದವರಲ್ಲಿಯೂ ಕೆಲವರು ವ್ಯವಸಾಯದ ಅವಲಂಬಿಗಳಾಗಿದ್ದಾರೆ. ಕರ್ನಾಟಕವೂ ದಕ್ಷಿಣ ಭಾರತಕ್ಕೆ ಸೇರಿದೆ. ಪೂರ್ವ ರೇಖಾಂಶ 14°–12′ರಿಂದ 70°–30′ರವರೆಗೆ, ಉತ್ತರ ಅಕ್ಷಾಂಶ 10°–30′ ರಿಂದ 18°–45′ರ ವರೆಗಿನ ಪ್ರದೇಶವನ್ನು ಈ ನಾಡು ಆವರಿಸಿದೆ. ಉತ್ತರದಲ್ಲಿ ಗೋವಾ ಹಾಗೂ ಮಹಾರಾಷ್ಟ್ರ ರಾಜ್ಯಗಳು. ಪೂರ್ವದಲ್ಲಿ ಆಂಧ್ರಪ್ರದೇಶ, ದಕ್ಷಿಣದಲ್ಲಿ ತಮಿಳು ನಾಡು ಹಾಗೂ ಕೇರಳ ರಾಜ್ಯಗಳಿವೆ. ಪಶ್ಚಿಮದಲ್ಲಿ ಅರಬ್ಬೀ ಸಮುದ್ರವಿದೆ. ಈ ಮಧ್ಯೆ ಇರುವ 74861 ಚದರ ಮೈಲಿಗಳ ಪ್ರದೇಶವೇ ಕರ್ನಾಟಕ ರಾಜ್ಯ. ಈ ಭಾಗದಲ್ಲಿ ಪ್ರಚಲಿತ ವಿರುವ ಪರಂಪರೆಯಿಂದ ಬಂದ ವ್ಯವಸಾಯ ಪದ್ಧತಿಗಳನ್ನು ಇಲ್ಲಿ ಪರಿಚಯಿಸಲು ಪ್ರಯತ್ನಿಸಲಾಗಿದೆ.

ಭೂ ಲಕ್ಷಣ, ಮಣ್ಣು, ಹವಾಗುಣಗಳಿಗನುಸಾರವಾಗಿ

Sri Vidyabharathi Book Centre, Sringeri

CC-0. In Public Domain. Digitized by eGangotri

ಕರ್ನಾಟಕವನ್ನು ಮೂರು ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸ ಬಹುದು. 1. ಕರಾವಳಿ ಪ್ರದೇಶ 2. ಮಲೆನಾಡು ಪ್ರದೇಶ 3. ಮೈದಾನ ಪ್ರದೇಶ. ಈ ಒಂದೊಂದು ಪ್ರದೇಶದಲ್ಲಿ ಮತ್ತೆ ಉಪವಿಭಾಗಗಳನ್ನೂ ಮಾಡಿಕೊಳ್ಳಬಹುದು. ಏಕೆಂದರೆ ವ್ಯವಸಾಯ ಪದ್ಧತಿಗಳು ಅಲ್ಲಿನ ಮಳೆ ಮತ್ತು ಹವಾಮಾನ ಗಳಿಗೆ ಅನುಸಾರವಾಗಿರುತ್ತವೆ. ಕರಾವಳಿಯ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಜಿಲ್ಲೆಗಳಲ್ಲಿಯೇ ಹಲವು ವ್ಯತ್ಯಾಸಗಳು ಕಂಡುಬರುತ್ತವೆ. ಮೈದಾನದಲ್ಲಿಯಂತೂ ತುಂಗಭದ್ರಾ ನದಿಯಿಂದ ಉತ್ತರದ ಭಾಗ ಮತ್ತು ದಕ್ಷಿಣದ ಹಳೆಯ ಮೈಸೂರಿನ ಭಾಗ ಎಂದು ಕರೆಯಬಹುದು. ಆದರೆ ಮೇಲೆ ಸೂಚಿಸಿದ ಮೂರು ವಿಭಾಗಗಳು ಪ್ರಧಾನ ಲಕ್ಷಣಗಳು ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ಮಾಡಿಕೊಂಡಂತಹವು.

ಕರಾವಳಿಯು ಪ್ರದೇಶವನ್ನು ಕಡಲತೀರ ಪ್ರದೇಶ ಎಂದೂ ಕರೆಯುತ್ತಾರೆ. ಒಂದು ಕಡೆ ಸಮುದ್ರ ಮತ್ತೊಂದು ಕಡೆ ಸಹ್ಯಾದ್ರಿ ಪರ್ವತ ಶ್ರೇಣಿ. ಈ ಮಧ್ಯೆ ಉತ್ತರ ದಕ್ಷಿಣವಾಗಿ ಹಬ್ಬಿರುವ ಪ್ರದೇಶವಿದು. ಈ ಭೂಭಾಗ ಮೆಕ್ಕಲು ಮಣ್ಣಿ ನಿಂದ ಕೂಡಿದೆ. ನೈಸರ್ಗಿಕವಾಗಿ ಈ ಪ್ರದೇಶದ ಮಣ್ಣು ಅಷ್ಟೊಂದು ಫಲವತ್ತಾಗಿಲ್ಲವೆಂಬುದು ತಜ್ಞರ ಅಭಿಪ್ರಾಯ. ಒಳ್ಳೆಯ ಬೆಳೆ ತೆಗೆಯಬೇಕಾದರೆ ಅಪಾರವಾದ ಗೊಬ್ಬರ ಕೊಡ ಬೇಕಾಗುತ್ತದೆ. ಬತ್ತ ಮತ್ತು ತೆಂಗು ಇಲ್ಲಿನ ಪ್ರಮುಖವಾದ ಬೆಳೆಗಳು. ಈ ಪ್ರದೇಶದ ಹವಾಮಾನ ವರ್ಷವಿಡೀ ಉಷ್ಣತೆ ಯಿಂದ ಕೂಡಿರುತ್ತದೆ. ಆದುದರಿಂದ ವರ್ಷದ ಎಲ್ಲಾ ಕಾಲ ದಲ್ಲಿಯೂ ಬತ್ತವನ್ನು ಬೆಳೆಯಬಹುದು. ಇಲ್ಲಿ ಮುಂಗಾರು ಮಳೆ ವಿಪರೀತವಾಗಿ ಬೀಳುತ್ತದೆ. ಹಿಂಗಾರು ಇಲ್ಲವೆಂದೇ ಹೇಳ ಬೇಕು. ಭೂಮಿ ಸಮುದ್ರದ ಕಡೆಗೆ ಇಳಿಜಾರಾಗಿರುವುದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri



ತೆಂಗು

ನೀರು ಬೇಗ ಸೋರಿಹೋಗುತ್ತದೆ. ಹೀಗಾಗಿ ಬೇಸಗೆಯ ಕಾಲದಲ್ಲಿ ಇಲ್ಲಿ ನೀರಿಗೆ ಅಭಾವವೆಂದೇ ಹೇಳಬೇಕು. ಆದುದರಿಂದ ಬತ್ತವನ್ನು ಆಗಸ್ಟ್–ಸೆಪ್ಟಂಬರ್ ತಿಂಗಳಿನಲ್ಲಿ ನಾಟಿಮಾಡುತ್ತಾರೆ. ನವೆಂಬರ್ ತಿಂಗಳಿಗೆ ಅದು ಕೊಯ್ಲಿಗೆ ಬರುತ್ತದೆ. ಬತ್ತ ಕೊಯ್ದ ನಂತರ ಗದ್ದೆಗಳಲ್ಲಿ ಹಸಿ ಇರುತ್ತದೆ. ಆಗ ಉದ್ದು, ಹೆಸರು, ಕಡಲೆ ಮುಂತಾದ ಕಾಳುಗಳನ್ನು ಬೆಳೆಯಬಹುದು.

ಕರಾವಳಿಗೂ ಮೈದಾನ ಪ್ರದೇಶಕ್ಕೂ ಮಧ್ಯೆ ಇರುವ ಪಶ್ಚಿಮ ಘಟ್ಟಗಳ ಪ್ರದೇಶವೇ ಮಲೆನಾಡು. ಮಲೆನಾಡು

CC-O. Jangamwadi Math Collection. Digitized by eGangotri

CC-0. In Public Domain. Digitized by eGangotri

ಎಂದರೆ ಬೆಟ್ಟಗಳ ದೇಶ ಎಂದು ಅರ್ಥ. ಒಂದು ಕಾಲಕ್ಕೆ ಈ ಭಾಗ ದಟ್ಟವೂ ಭಯಂಕರವೂ ಆದ ಕಾಡುಗಳಿಂದ ಕೂಡಿತ್ತು. ಕರ್ನಾಟಕದಲ್ಲಿ ಅತ್ಯಧಿಕ ಮಳೆ ಬೀಳುವ ಪ್ರದೇಶ ಎಂದರೆ ಮಲೆನಾಡು. ಇಲ್ಲಿ ನೂರರಿಂದ ಇನ್ನೂರೈವತ್ತು ಅಂಗುಲದ ವರೆಗೆ ಮಳೆಬೀಳುವುದಾಗಿ ತಿಳಿದು ಬರುತ್ತದೆ. ಜೂನ್ ತಿಂಗಳಿನಿಂದ ಆಕ್ಟೋಬರ್‌ವರೆಗೆ ಇಲ್ಲಿ ಮಳೆಗಾಲ. ಹಿಂಗಾರು ಮಳೆ ಇಲ್ಲಿ ಕಡಿಮೆ. ಇಳಿಜಾರು ಪ್ರದೇಶದಲ್ಲಿ ಕಾಫಿ ತೋಟಗಳಿವೆ. ಈ ತೋಟಗಳಲ್ಲಿ ಮೆಣಸು, ಏಲಕ್ಕಿ ಮುಂತಾದ ಸಾಂಬಾರ ಬೆಳೆಗಳನ್ನು ಬೆಳೆಯುತ್ತಾರೆ. ಕಣಿವೆಯ ಮಟ್ಟವಾದ ಪ್ರದೇಶದಲ್ಲಿ ಬತ್ತ ಬೆಳೆಯುತ್ತಾರೆ. ಈ ಮಧ್ಯೆ ಅಡಿಕೆ ತೋಟಗಳಿರುತ್ತವೆ. ಇಲ್ಲಿಯ ಮಣ್ಣು ಫಲವತ್ತಾಗಿದೆ. ಬೆಟ್ಟದ ಮೇಲಿನ ಕಾಡುಗಳಲ್ಲಿ ಎಲೆಗಳು ಉದುರಿ ಗೊಬ್ಬರವಾಗುತ್ತದೆ. ಮಳೆಗಾಲದಲ್ಲಿ ಅದು ಕಣಿವೆಯ ಮಟ್ಟಪ್ರದೇಶಗಳಿಗೆ ಕೊಚ್ಚಿ ಬರುತ್ತದೆ. ಈ ಭಾಗದಲ್ಲಿ ಬತ್ತ ಅತ್ಯಂತ ಫಲವತ್ತಾಗಿ ಬೆಳೆಯುತ್ತದೆ. ಆದುದರಿಂದ ಇದನ್ನು ಬತ್ತದ ಕಣಜ ಎಂದು ಕರೆಯುತ್ತಿದ್ದರು. ಎಲ್ಲ ಕಡೆಗಳಲ್ಲಿ ಭಾರಿ ನೀರಾವರಿ ಯೋಜನೆಗಳಿಂದ ನೀರೊದಗಿ ಬತ್ತ ಬೆಳೆಯಲಾರಂಭಿಸಿದ ಮೇಲೆಯೂ ಈ ಭಾಗ ದಾಖಲೆಯಾಗಿಯೇ ಉಳಿದಿದೆ. ಎತ್ತರವಾದ ಪ್ರದೇಶವಾದುದರಿಂದ ಬೇಸಿಗೆಯಲ್ಲಿ ಭೂಮಿ ಬೇಗ ಒಣಗುತ್ತದೆ. ಆದುದರಿಂದ ಬೇಸಿಗೆ ಬೆಳೆ ಈ ಭಾಗದಲ್ಲಿ ಕಡಿಮೆ. ಈಗ ನೀರಾವರಿ ಯೋಜನೆಗಳಾಗಿದ್ದು ಅದೂ ಸಹ ಸಾಧ್ಯವಾಗುತ್ತಿದೆ.

ಮಲೆನಾಡು ಮತ್ತು ಕರಾವಳಿಯ ಪ್ರದೇಶವನ್ನುಳಿದ ಕರ್ನಾಟಕದ ಉಳಿದ ಭಾಗವನ್ನು ಮೈದಾನ ಪ್ರದೇಶವೆಂದು ಕರೆಯಬಹುದು. ಇದರಲ್ಲಿ ಉತ್ತರ ಕರ್ನಾಟಕದ ಮೈದಾನ ಪ್ರದೇಶ ಮತ್ತು ದಕ್ಷಿಣ ಕರ್ನಾಟಕದ ಮೈದಾನ ಪ್ರದೇಶ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಟ್ಟಾಭಿ

ಭತ್ತ

Sri Vidyabharathi Book Centre, Sringeri

CC-O. In Public Domain. Digitized by eGangotri



ರಾಧಿ
Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಎರಡು ಭಾಗ. ಉತ್ತರ ಕರ್ನಾಟಕ ಮೈದಾನ ಪ್ರದೇಶ ತುಂಗಾಭದ್ರಾನದಿಯಿಂದ ಮೇಲಿನದು. ಹಳೆಯ ಮೈಸೂರಿನ ಭಾಗ ದಕ್ಷಿಣ ಕರ್ನಾಟಕ. ಉತ್ತರ ಮೈದಾನ ಪ್ರದೇಶದಲ್ಲಿ ಜೋಳ, ಗೋದಿ, ಕಡಲೆಕಾಯಿ ಅಥವಾ ಶೇಂಗ, ಎಣ್ಣೆಬೀಜ ಗಳು ಪ್ರಮುಖವಾಗಿ ಬೆಳೆಯುತ್ತವೆ. ದಕ್ಷಿಣ ಮೈದಾನದಲ್ಲಿ ರಾಗಿ, ಬತ್ತ, ಜೋಳ, ಎಣ್ಣೆಕಾಳುಗಳು ತೆಂಗು ಪ್ರಧಾನವಾಗಿ ಬೆಳೆಯುತ್ತವೆ. ಉತ್ತರ ಮೈದಾನ ಎರೆಮಣ್ಣಿನಿಂದ ಕೂಡಿದ ಸಮತಟ್ಟು ಪ್ರದೇಶ. ದಕ್ಷಿಣ ಮೈದಾನ ಮರಳು ಮಿಶ್ರಿತ ಕೆಂಪು ಮಣ್ಣಿನ ಏರುತಗ್ಗಿನ ಪ್ರದೇಶ. ಈ ಪ್ರದೇಶದಲ್ಲಿ ಮುಂಗಾರು ಹಿಂಗಾರು ಮಳೆಗಳೆರಡೂ ಬೀಳುತ್ತವೆ. ಮುಂಗಾರು ಸೀಮಿತವಾಗಿಯೂ, ಹಿಂಗಾರು ಪ್ರಧಾನವಾಗಿಯೂ ಬೀಳು ತ್ತದೆ. ಒಟ್ಟಿನಲ್ಲಿ ಮೈದಾನ ಪ್ರದೇಶಕ್ಕೆ ಪೂರ್ವದಿಂದ ಬರುವ ಮಳೆಯ ಆಸರೆಯೇ ಹೆಚ್ಚು. ಸೆಪ್ಟೆಂಬರ್ ತಿಂಗಳಲ್ಲಿ ಬರುವ ಹಿಂಗಾರು ಮಳೆಯನ್ನೇ ಈ ಭಾಗದ ರೈತರು ನಂಬಿರುತ್ತಾರೆ. ಒಂದು ಮಳೆ ಯಾರು ತಪ್ಪಿದರೂ ನಾನು ತಪ್ಪುವುದಿಲ್ಲ ಎಂದು ರೈತನ ಕೈಮೇಲೆ ಕೈಹಾಕಿ ಭಾಷೆ ನೀಡಿತಂತೆ. ಅದೇ ಹಸ್ತದ ಮಳೆ. ಸಾಮಾನ್ಯವಾಗಿ ಈ ಮಳೆ ಹುಯ್ದೇ ಹುಯ್ಯುತ್ತದೆಂದು ಈ ಭಾಗದವರ ನಂಬಿಕೆ. ಹಸ್ತದ ಮಳೆ ಸರಿಯಾಗಿ ಬರದೇ ಹೋದರೆ ಆ ವರ್ಷ ಬೆಳೆ ಸರಿಯಿಲ್ಲ ಎಂಬುದು ರೈತರ ನಂಬಿಕೆ. ವ್ಯವಸಾಯ ಮತ್ತು ಅದರ ಪದ್ಧತಿ ಈ ಎರಡೂ ದೃಷ್ಟಿಗಳಿಂದಲೂ ಕರ್ನಾಟಕದ ಮೈದಾನ ಪ್ರದೇಶವೇ ಪ್ರಮುಖ ವಾದುದೆಂದು ಹೇಳಬಹುದು.

ಕರ್ನಾಟಕದ ವ್ಯವಸಾಯ ಸಾಮಾನ್ಯವಾಗಿ ಎಲ್ಲಾ ಕಡೆ ಗಳಲ್ಲಿಯೂ ಹಿಂದೂ ಹೊಸವರ್ಷ ಯುಗಾದಿಯಿಂದ ಆರಂಭ ವಾಗುತ್ತದೆ. ಯುಗಾದಿಯ ದಿನ ಅಥವಾ ಮೊದಲ ಮಳೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿದ್ದ ನಂತರದ ಶುಭ ದಿನ ಹೊನ್ನಾರು ಕಟ್ಟುತ್ತಾರೆ. ಅಂದು ಗ್ರಾಮ ದೇವರ ಪೂಜೆಯ ನಂತರ ಊರ ಹಿರಿಯ ಜೋಯಿಸರ ಮನೆಗೆ ಹೋಗಿ ಹೆಸರು ಬಲ ಕೇಳುತ್ತಾನೆ. ಹೆಸರು ಬಲ ಎಂದರೆ ಯಾವ ಹೆಸರಿನ ವ್ಯಕ್ತಿಗೆ ಮುಂದಲ ಆರು ಹಿಡಿಯಲು ಗ್ರಹಗತಿ ಮತ್ತು ರಾಶಿಫಲ ಉತ್ತಮವಾಗಿದೆ ಎಂಬುದು. ಹಾಗೆಯೇ ಯಾವ ಬಣ್ಣದ ಎತ್ತುಗಳನ್ನು ಮುಂದಲ ಆರಿಗೆ ಹೂಡ ಬೇಕೆಂಬುದು. ನಕ್ಷತ್ರಬಲದ ಆಧಾರದಿಂದ ಜೋಯಿಸ ಇದನ್ನು ಹೇಳುತ್ತಾನೆ. ಈ ವಿಚಾರವನ್ನು ಊರಿನವರಿಗೆಲ್ಲಾ ತಿಳಿಸುತ್ತಾನೆ. ಆ ಹೆಸರು ಬಲದ ವ್ಯಕ್ತಿ ಮತ್ತು ಬಣ್ಣದ ಎತ್ತುಗಳು ಮುಂದಲ ಆರಿಗೆ ಎಂದು ನಿರ್ಧಾರವಾಗುತ್ತದೆ. ಈ ವಿಚಾರದಲ್ಲಿ ಹೆಚ್ಚು ಕಡಿಮೆ, ಮೇಲು ಕೀಳುಗಳೆಂಬ ಭಾವನೆಗೆ ಅವಕಾಶವೇ ಇಲ್ಲ. ಆ ದಿನ ಹೊನ್ನಾರು ಕಟ್ಟುವ ವಿಷಯವನ್ನು ತಮಟೆಯವನು ಸಾರಿಕೊಂಡು ಬರುತ್ತಾನೆ.

ಮೂರೂವರೆ ನಾಲ್ಕು ಗಂಟೆಯ ಹೊತ್ತಿಗೆ ಹೊನ್ನಾರು ಕಟ್ಟುವ ಕಾಲ. ಊರ ಪೂರ್ವಭಾಗದಲ್ಲಿ ಹಿರಿಯರು ಯುವಕ ರೆನ್ನದೆ ತಮ್ಮ ತಮ್ಮ ಆರುಗಳೊಂದಿಗೆ ಸಾಲಾಗಿ ಪೂರ್ವಾಭಿ ಮುಖವಾಗಿ ನಿಲ್ಲುತ್ತಾರೆ. ಜೋಯಿಸ ನಿಗದಿಮಾಡಿದ ಆರು ಮುಂಭಾಗದಲ್ಲಿರುತ್ತದೆ. ಊರ ಹಿರಿಯ ಈ ಆರುಗಳಿಗೆ ಹಣ್ಣು ಕಾಯಿಮಾಡಿ ಕರ್ಪೂರ ಬೆಳಗುತ್ತಾನೆ. ದೇವರ ಗುಡಿಯಿಂದ ಬಂದ ಹೊನ್ನೂಲನ್ನು ಮುಂದಿನ ಆರಿನಿಂದ ಆರಂಭಿಸಿ ಎಲ್ಲಾ ಆರುಗಳಿಗೂ ಕಟ್ಟುತ್ತಾನೆ. ನೋಡಲು ಬಂದು ನಿಂತ ಜನ ಹರ್ಷೋದ್ಗಾರ ಮಾಡುತ್ತಾರೆ. ಆರುಗಳು ನಿಧಾನವಾಗಿ ಪೂರ್ವಾಭಿಮುಖವಾಗಿ ಸ್ವಲ್ಪದೂರ ಹೋಗುತ್ತವೆ. ಅನಂತರ ಬಲಕ್ಕೆ ತಿರುಗಿ ಊರು ಸುತ್ತಾ ಉತ್ತುಕೊಂಡು ಬರುತ್ತಾರೆ. ಆರುಗಳೆಲ್ಲಾ ಮತ್ತೆ ಹೊರಟ ಜಾಗಕ್ಕೆ ಬಂದು ಸೇರುತ್ತವೆ.

CC-O. Jyanmandir Collection Trust, Bhuj. Digitized by eGangotri

CC-O. In Public Domain. Digitized by eGangotri

ಆನಂತರ ಆವರವರು ತಮ್ಮ ತಮ್ಮ ಹೊಲಗಳಿಗೆ ಹೋಗಿ ಸ್ವಲ್ಪ ಹೊತ್ತು ಉತ್ತು ಬರುತ್ತಾರೆ. ಮಾರನೆಯ ದಿನ ವರ್ಷತೊಡಕು. ಆರು ಕಟ್ಟುವುದಿಲ್ಲ. ಅಲ್ಲಿಂದ ಮುಂದೆ ಆ ವರ್ಷದ ವ್ಯವಸಾಯ ನಿರಂತರವಾಗಿ ಸಾಗುತ್ತದೆ.

ಕರ್ನಾಟಕದಲ್ಲಿ ವಿವಿಧ ಹವಾಗುಣ ಮತ್ತು ಮಣ್ಣುಗಳಿವೆ. ಅವುಗಳಿಗನುಸಾರವಾಗಿ ಬೆಳೆಗಳು ಬೆಳೆಯುತ್ತವೆ. ಆ ಬೆಳೆಗಳನ್ನು ಅನೇಕ ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯದು 1. ಮುಂಗಾರು ಬೆಳೆಗಳು 2. ಹಿಂಗಾರು ಬೆಳೆಗಳು 3. ಬೇಸಿಗೆಯ ಬೆಳೆಗಳು. ಎರಡನೆಯದಾಗಿ 1. ಖುಷ್ಕಿ ಬೆಳೆಗಳು 2. ತರಿಬೆಳೆಗಳು. ಮೂರನೆಯದು ಬಾಗಾಯಿತು ಬೆಳೆಗಳು. ಈ ವಿಭಾಗಗಳನ್ನು ನಿರ್ದುಷ್ಟವಾಗಿ ಮಾಡಲಾಗುವುದಿಲ್ಲ. ಕೆಲವು ಬೆಳೆಗಳು ಈ ಮೂರು ವಿಭಾಗದಲ್ಲಿಯೂ ಬಂದು ಬಿಡುತ್ತವೆ. ಆದುದರಿಂದ ನಮ್ಮ ಬೆಳೆಗಳನ್ನು ಗುಂಪುಗಳಾಗಿ ವಿಂಗಡಿಸಿ 1. ಧಾನ್ಯದ ಬೆಳೆಗಳು 2. ಕಾಳಿನ ಬೆಳೆಗಳು 3. ಎಣ್ಣೆಕಾಳಿನ ಬೆಳೆಗಳು 4. ಆರ್ಥಿಕ ಬೆಳೆಗಳು 5. ಸಂಬಾರ ಬೆಳೆಗಳು ಎಂದು ಕರೆಯಬಹುದು.

1. ಧಾನ್ಯದ ಬೆಳೆಗಳು : ರಾಗಿ, ಜೋಳ, ಬತ್ತ, ಗೋದಿ, ಸಜ್ಜೆ ಹಾರಕ, ಸಾಮೆ ನವಣೆ ಇತ್ಯಾದಿ
2. ಕಾಳಿನ ಬೆಳೆಗಳು : ಅವರೆ, ತೊಗರಿ, ಹಲಸಂದೆ, ಕಡಲೆ, ಉದ್ದು, ಹುರುಳಿ
3. ಎಣ್ಣೆ ಬೀಜಗಳು : ನೆಲಗಡಲೆ, ಎಳ್ಳು, ಹುಚ್ಚೆಳ್ಳು, ಹರಳು, ಕುಸುಬೆ, ಆಗಸೆ ಇತ್ಯಾದಿ.
4. ವಾಣಿಜ್ಯ ಬೆಳೆಗಳು : ಕಬ್ಬು, ಹತ್ತಿ, ಹೊಗೆಸೊಪ್ಪು, ಹಿಪ್ಪನೇರಳೆ
5. ಸಾಂಬಾರದ ಬೆಳೆಗಳು: ಮೆಣಸಿನಕಾಯಿ, ಸಾಂಬಾರ, ಸಾಸುವೆ, ಅರಿಸಿಣ, ಬೆಳ್ಳುಳ್ಳಿ, ಜೀರಿಗೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧಾನ್ಯದ ಬೆಳೆಗಳು

ಮನುಷ್ಯನ ಜೀವನದಲ್ಲಿ ಧಾನ್ಯದ ಬೆಳೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವೇ ಅವನ ಮುಖ್ಯ ಆಹಾರಗಳು. ಮನುಷ್ಯನ ಎಲ್ಲಾ ಅವಶ್ಯಕತೆಗಳಿಗೂ ಧಾನ್ಯಗಳು ಬೇಕು. ಆದುದರಿಂದಲೇ ಅವನು ಇವುಗಳನ್ನು ಹೆಚ್ಚಾಗಿ ಬೆಳೆಯುತ್ತಾನೆ. ತನಗೆ ವರ್ಷಕ್ಕೆ ಬೇಕಾಗುವಷ್ಟು ಇಟ್ಟುಕೊಂಡು ಮಿಕ್ಕದ್ದನ್ನು ಮಾರುತ್ತಾನೆ. ಆದುದರಿಂದ ಇವುಗಳನ್ನು ಆಹಾರದ ಬೆಳೆಗಳು ಎಂದೂ ಕರೆಯುತ್ತಾರೆ, ಇವುಗಳಲ್ಲಿ ರಾಗಿ, ಜೋಳ, ಬತ್ತ, ಗೋದಿ, ಸಜ್ಜೆ, ಹಾರಕ, ಸಾಮೆ, ನವಣೆ ಬರುತ್ತವೆ.

ರಾಗಿ

ರಾಗಿಯಲ್ಲಿ ಅನೇಕವಿಧಗಳುಂಟು. ಪ್ರಮುಖವಾಗಿ ಎರಡು ಜಾತಿಯಾಗಿ ವಿಂಗಡಿಸಿಕೊಂಡಿದ್ದಾರೆ. ಮುಂಗಾರು ರಾಗಿ ಮತ್ತು ಹಿಂಗಾರು ರಾಗಿ. ಗಿಡ್ಡರಾಗಿ, ಹೈನುರಾಗಿ ಎಂದೂ ಕರೆಯುತ್ತಾರೆ. ರಾಗಿ ಪ್ರಧಾನವಾಗಿ ಹಳೇ ಮೈಸೂರು ಭಾಗದಲ್ಲಿ ಬೆಳೆಯುತ್ತದೆ. ಇದು ಆ ಭಾಗದ ಜನರ ಪ್ರಮುಖ ಆಹಾರ. ರಾಗಿಯಲ್ಲಿ ಬುಂಡಿಗ, ಚವಲಿಗ, ಗಿಡ್ಡ ಎಂದು ಅನೇಕ ಜಾತಿಗಳಿವೆ. ಕರಿಕಡ್ಡಿರಾಗಿ ಎಂಬುದೂ ಒಂದು ಜಾತಿ. ಈಗ ಆಧುನಿಕವಾಗಿ ಅನೇಕ ಜಾತಿಯ ರಾಗಿಗಳು ಜಾರಿಗೆ ಬಂದಿವೆ. ಆದರೂ ನಮ್ಮ ಜನರು ಪರಂಪರೆಯಿಂದ ಬಂದ ಜಾತಿಯ ರಾಗಿಗಳನ್ನೇ ಹೆಚ್ಚಾಗಿ ಬೆಳೆಯುತ್ತಾರೆ. ಇದಕ್ಕೆ ಎರಡು ಕಾರಣಗಳುಂಟು. ಒಂದು, ಈ ಜಾತಿಗಳು ನಮ್ಮ ನೆಲಕ್ಕೆ ಒಗ್ಗಿಕೊಂಡಿವೆ. ಆದುದರಿಂದ ಅವುಗಳಿಗೆ ರೋಗಾದಿಗಳು ಬರುವುದು ಕಡಿಮೆ. ಮತ್ತೊಂದು, ಈ ರಾಗಿಯ ರುಚಿಗೆ ನಮ್ಮ ಜನರ ನಾಲಿಗೆ ಒಗ್ಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗಿದೆ. ಇದರೊಂದಿಗೆ ಪರಂಪರೆಯಿಂದ ಬಂದ ನಂಬಿಕೆಗಳೂ ಕೂಡಿಕೊಂಡಿವೆ.

ರಾಗಿ ಮುಖ್ಯವಾಗಿ ಹೊಲದ ಬೆಳೆ. ಗದ್ದೆಯಲ್ಲಿ ಮುಂಗಾರು ಮತ್ತು ಬೇಸಿಗೆಯ ಬೆಳೆಯಾಗಿ ಮಾತ್ರ ಇದನ್ನು ಬೆಳೆಯುತ್ತಾರೆ. ಇದನ್ನು ಮಳೆಯ ಆಶ್ರಯದಿಂದ ಬೆಳೆಯುತ್ತಾರೆ. ಮೇ ಅಥವಾ ಜೂನ್ ತಿಂಗಳಿನಲ್ಲಿ ಈ ರಾಗಿಯನ್ನು ಹಾಕುತ್ತಾರೆ. ಇದು ಗೌರಿಹಬ್ಬದ ಹೊತ್ತಿಗೆ ಅಂದರೆ ಸಾಧಾರಣವಾಗಿ ಸೆಪ್ಟೆಂಬರ್ ತಿಂಗಳಿನಲ್ಲಿ ಕೊಯ್ಲಿಗೆ ಬರುತ್ತದೆ. ಹೈನು ರಾಗಿಯನ್ನು ಆರಿದ್ರಾ ಮಳೆಯಲ್ಲಿ ಹಾಕಲು ಆರಂಭಿಸುತ್ತಾರೆ. ಈ ಕಾರಣದಿಂದಲೇ ಆರಿದ್ರಾ ಮಳೆಯು ಕರ್ನಾಟಕದ ರೈತನ ಆಶೆ ನಿರಾಶೆಗಳ ಸಂಕೇತವಾಗಿರುತ್ತದೆ. ಈ ಮಳೆ ಸರಿಯಾಗಿ ಬೀಳದಿದ್ದಲ್ಲಿ ಆ ವರ್ಷ ರಾಗಿಯ ಫಸಲು ವಿಫಲವಾಯಿತೆಂದು ನಂಬುತ್ತಾರೆ. ಹೈನು ಅಥವಾ ಹಿಂಗಾರು ರಾಗಿ ನವೆಂಬರ್–ಡಿಸೆಂಬರ್ ತಿಂಗಳಿನಲ್ಲಿ ಕೊಯ್ಲಿಗೆ ಬರುತ್ತದೆ.

ವರ್ಷದ ಮೊದಲ ಮಳೆ ಬಿದ್ದ ಕೂಡಲೆ ರೈತ ತನ್ನ ಆರು ಹೂಡುತ್ತಾನೆ. ಮೊದಲು ತನ್ನ ಹೊಲವನ್ನು ಸೀಳುಕ್ಕೆ ಮಾಡುತ್ತಾನೆ. ಸೀಳುಕ್ಕೆ ಎಂದರೆ ಮಳೆಯ ನೀರು ಹರಿದು ಹೋಗದಂತೆ ಮಾಡುವ ಉಳುಮೆ. ಇದರಲ್ಲಿ ಕ್ರಮವೇನೂ ಇರಬೇಕಾದುದಿಲ್ಲ. ಮೊದಲ ಮಳೆ ಬಿದ್ದ ಮೇಲೆ ಎಲ್ಲಾ ಹೊಲಗದ್ದೆಗಳನ್ನೂ ಹೀಗೆ ಉಳುತ್ತಾರೆ. ಇದಕ್ಕೆ ಬುಂಡುಕ್ಕೆ ಎಂದೂ ಹೆಸರು. ಸವೆದು ತುಂಡಾಗಿರುವ ನೇಗಿಲಿನಿಂದ ಮೇಲಿನ ಘಟ್ಟಿಯಾದ ಭಾಗ ಒಡೆಯುವಂತೆ ಸೀಳುವುದು. ಮುಂದೆ ಮಳೆ ಬಿದ್ದಾಗ ನೀರು ಹರಿಯದೆ ಆಳಕ್ಕೆ ಇಳಿದು ಭೂಮಿ ಚೆನ್ನಾಗಿ ನೆನೆಯುತ್ತದೆ. ರೈತ ಯಾವ ಜಮೀನಿಗೆ ಮುಂಗಾರು ಬೆಳೆ ಹಾಕಬೇಕೆಂದು ಹೊಲವನ್ನು ವಿಭಜಿಸುತ್ತಾನೆ. ಅದರಂತೆ

CC-O. Vidyaranya Varadhi Book Trust Collection, Bangalore.

CC-O. In Public Domain. Digitized by eGangotri

ಮೊದಲು ಆ ಜಮೀನಿನಿಂದ ಆರಂಭಿಸಿ ತನ್ನ ಎಲ್ಲಾ ಹೊಲ ಗದ್ದೆ ಗಳನ್ನೂ ಮೊದಲು ಸೀಳುಕ್ಕೆ ಮಾಡುತ್ತಾನೆ. ಆನಂತರ ಮಗು ಚುಕ್ಕೆಗೆ ಆರಂಭಿಸುತ್ತಾನೆ. ಎರಡು ಮೂರು ಜೊತೆ ಎತ್ತು ಗಳನ್ನು ಇಟ್ಟಿರುವವರು ಮುಂದೆ ಸೀಳುಕ್ಕೆಯ ನಂತರ ಮಗು ಚುಕ್ಕೆಯನ್ನೂ ಆರಂಭಿಸುತ್ತಾರೆ. ಎರಡು ಮೂರು ಉಕ್ಕೆಯಾದ ಮೇಲೆ ಬೆಳೆಹಾಕುವ ಅಂತಿಮ ರೂಪು ಕೊಡುತ್ತಾರೆ.

ಮೊದಲ ಮಳೆ ಎರಡು ಮೂರು ಹದ ಬಿದ್ದಮೇಲೆ ಗಿಡ್ಡ ರಾಗಿ ಅಥವಾ ಮುಂಗಾರು ರಾಗಿಯನ್ನು ಹಾಕುವ ಉರ್ಪಾಡು ನಡೆಯುತ್ತದೆ. ಸಾಮಾನ್ಯವಾಗಿ ಕಾರುರಾಗಿಯನ್ನು ಸೀಮಿತ ವಾದ ಪ್ರದೇಶದಲ್ಲಿ ಮಾತ್ರ ಬೆಳೆಯುತ್ತಾರೆ. ಬತ್ತದ ನಾಟಿಗೆ ಮುನ್ನ ಗದ್ದೆಯಲ್ಲಿ ಬೆಳೆಯುವುದುಂಟು. ಹೊಲಗಳಲ್ಲಿ ಕೆಲವು ಪ್ರದೇಶದಲ್ಲಿ ಮಾತ್ರ ಬೆಳೆಯುತ್ತಾರೆ. ಗಿಡ್ಡರಾಗಿಯನ್ನು ಬಿತ್ತನೆ ಮಾಡುವುದು ಅಪರೂಪ. ನಾಟಿ ಹಾಕುವುದೇ ಹೆಚ್ಚು. ಮಳೆ ಬಿದ್ದು ಭೂಮಿ ಹದವಾದ ಮೇಲೆ ಒಟ್ಟಲು ಹಾಕುತ್ತಾರೆ. ಒಟ್ಟಲು ಹೊಲಗಳಿಗೆ ಹೆಚ್ಚು ಗೊಬ್ಬರ ಹಾಕಿರುತ್ತಾರೆ. ಒಟ್ಟಲು ಹೊಲವನ್ನು ಎರಡು ಮೂರು ಬಾರಿ ಚೆನ್ನಾಗಿ ಉತ್ತು ಸೆತ್ತೆಸೆದೆ ಯನ್ನೆಲ್ಲಾ ತೆಗೆದು ಸ್ವಚ್ಛ ಮಾಡುತ್ತಾರೆ. ಮೊದಲೆ ಒಟ್ಟಲು ಹೊಲಗಳಿಗೆ ಮಂಕರಿಗುಡ್ಡೆ ಹಾಕಿರುತ್ತಾರೆ. ಮಂಕರಿಗುಡ್ಡೆ ಎಂದರೆ ದನ ಮತ್ತು ಕುರಿ ಕೊಟ್ಟಿಗೆಯಿಂದ ಗುಡಿಸಿ ಮಂಕರಿ ಗಳಲ್ಲಿ ತುಂಬಿಕೊಂಡುಹೋದ ಗೊಬ್ಬರವನ್ನು ಒಂದು ಒಂದೂ ವರೆ ಆಡಿ ಅಂತರದಲ್ಲಿ ಗುಪ್ಪೆ ಹಾಕುವರು. ಇದರ ಜೊತೆಗೆ ಕಡೆಯ ಉಕ್ಕೆಯಲ್ಲಿ ಒಟ್ಟಲಿನ ಹೊಲದ ಅಗಲಕ್ಕನುಗುಣವಾಗಿ ಐದು ಹತ್ತು ಮಂಕರಿ ಹಣ್ಣು ಗೊಬ್ಬರವನ್ನು ತಿಪ್ಪೆಯಿಂದ ತೆಗೆದು ಚಲ್ಲುತ್ತಾರೆ. ಅದರ ಮೇಲೆ ರಾಗಿ ಚಲ್ಲುತ್ತಾರೆ. ರಾಗಿ ಚಲ್ಲಿದ ಮೇಲೆ ಉಳು ಪಲುಬೆ ಹೊಡೆಯುತ್ತಾರೆ. ಚೆನ್ನಾಗಿ

Sri Vidyabharathi Book Centre, Shringeri

CC-O. In Public Domain. Digitized by eGangotri

ಹದವಿದ್ದರೆ ನಾಲ್ಕೈದು ದಿನದಲ್ಲಿ ರಾಗಿ ಹುಟ್ಟಿ ಭೂಮಿಯಿಂದ ಮೇಲೆ ಕಾಣಿಸಿಕೊಳ್ಳುತ್ತದೆ. ಒಟ್ಟಲು ಹಾಕಿದ ಇಪ್ಪತ್ತರಿಂದ ಒಂದು ತಿಂಗಳಲ್ಲಿ ಈ ಒಟ್ಟಲಿನ ಸಸಿಗಳನ್ನು ಕಿತ್ತು ನೆಡುತ್ತಾರೆ.

ರಾಗಿ ಬೆಳೆಯಲ್ಲಿ ಬಿತ್ತನೆ, ನಾಟಿ, ಕೂರಿಗೆ, ಗುಣ ರಾಗಿ ಎಂದು ನಾಲ್ಕೈದು ವಿಧಗಳುಂಟು. ಬಿತ್ತನೆ ಎಂದರೆ ರಾಗಿಯ ಕಾಳುಗಳನ್ನು ಹದವರಿತು ಚಲ್ಲುವುದು. ಇದಕ್ಕೆ ತಳಿಯುವುದು, ಚಲ್ಲುವುದು, ಎಂಬ ಹೆಸರುಗಳೂ ಇವೆ. ಬಿತ್ತನೆ ರಾಗಿಯ ವ್ಯವಸಾಯ ತುಂಬಾ ಸೂಕ್ಷ್ಮವಾದುದು. ಭೂಮಿಯನ್ನು ಮೂರು ನಾಲ್ಕು ಉಕ್ಕೆ ಚೆನ್ನಾಗಿ ಉಳಬೇಕು. ಕೊನೆಯ ಉಳುಮೆಯಲ್ಲಿ ಗೊಬ್ಬರ ಚೆಲ್ಲಬೇಕು. ಒಂದು ಎಕರೆಗೆ ಎಂಟು ಹತ್ತು ಗಾಡಿಯಷ್ಟು ಗೊಬ್ಬರ ಚೆಲ್ಲುತ್ತಾರೆ. ಆರಿದ್ರಾ ಮಳೆ ಬಿದ್ದಮೇಲೆ ರಾಗಿ ಬಿತ್ತುತ್ತಾರೆ. ಬಿತ್ತುವುದನ್ನು ಕರಗತ ಮಾಡಿಕೊಂಡ ಹಿರಿಯರ ಕೈಯಿಂದ ಬಿತ್ತಿಸುವುದೂ ಉಂಟು. ತಮ್ಮ ಹೊಲಗಳಿಗೆ ಬೇಕಾಗುವಷ್ಟು ಬೀಜದ ರಾಗಿಯನ್ನು ಹೆಡಗೆಯಲ್ಲಿ ತುಂಬಿಕೊಂಡು ಹೋಗುತ್ತಾರೆ. ಕೈಯಲ್ಲಿ ಹಿಡಿಯಬಹುದಾದ ಮತ್ತೊಂದು ಪುಟ್ಟಕುಕ್ಕೆ ಇರುತ್ತದೆ. ಅದನ್ನು ಸಾರಿಸಿ ವಿಭೂತಿ ಹಚ್ಚಿ ಅದರ ತುಂಬಾ ರಾಗಿ ತುಂಬುತ್ತಾರೆ. ಅದರ ಮೇಲೆ ಸಗಣಿಯ ಉಂಡೆಗೆ ಗರಿಕೆಯ ದಳಗಳನ್ನು ಸಿಕ್ಕಿಸಿ ಇಡುತ್ತಾರೆ. ಇದನ್ನು ಬೆನಕಣ್ಣ ಅಥವಾ ವಿಘ್ನೇಶ್ವರ ಎಂದು ಕರೆಯುತ್ತಾರೆ. ಮೊದಲದಿನ ಮಾತ್ರ ಇಂತಹ ಆಚರಣೆಯನ್ನು ಮಾಡುತ್ತಾರೆ. ಒಂದು ಹಿಡಿ ರಾಗಿಯನ್ನೂ ಬೆನಕನನ್ನೂ ಒಂದು ಮೂಲೆಯಲ್ಲಿ ಕೂರಿಸಿ ಬಿತ್ತನೆ ಆರಂಭಿಸುತ್ತಾರೆ. ಉತ್ತು ಹದವಾದ ಹೊಲದ ಒಂದು ಬದಿಯಿಂದ ಉದ್ದುದ್ದವಾಗಿ ಆತ ಬಿತ್ತುತ್ತ ಸಾಗುತ್ತಾನೆ. ರಾಗಿ ತುಂಬಿದ ಪುಟ್ಟ ಕುಕ್ಕೆಯನ್ನು ಎಡದ ಕೈಯಲ್ಲಿ ಹಿಡಿದು ಬಲದ ಕೈಯಲ್ಲಿ ರಾಗಿ ತೆಗೆದುಕೊಂಡು ತಳಿಯುತ್ತಾ ನಡೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗಿ

ತ್ತಾನೆ. ಅವನು ಬಿತ್ತಿಕೊಂಡು ಹೋದ ಹಾಗೆಲ್ಲಾ ಹಿಂದಿನಿಂದ ಉಳುತ್ತಾ ಹೋಗುತ್ತಾರೆ. ಬಿತ್ತನೆ ಮತ್ತು ಉಳುವುದು ಮುಗಿದ ಮೇಲೆ ಸಾಲು ಹಾಕುತ್ತಾರೆ. ರಾಗಿಯ ಹೊಲಗಳಲ್ಲಿ ಉಪಬೆಳೆಯಾಗಿ ಅವರೆ, ಹಲಸಂದೆ, ಹುಚ್ಚೆಳ್ಳು, ಒಗರುಜೋಳ, ಪುಣ್ಡಿಗಿಡ ಮುಂತಾದುವನ್ನು ಸಾಲು ಹಾಕಿ ಬೆಳೆಯುತ್ತಾರೆ. ಸಾಲು ಹಾಕುವುದೆಂದರೆ ಬಿತ್ತಿದ ನಾಟಮಾಡಿದ ಕೂರಿಗೆಯ ಹೊಲಗಳಲ್ಲಿ ನಿರ್ದಿಷ್ಟವಾದ ದೂರಕ್ಕೆ ನೇಗಿಲಿನಿಂದ ಸಾಲು ಹೊಡೆಯುತ್ತಾರೆ. ಆದರ ಹಿಂಬದಿಗೆ ಕಟ್ಟಿದ ಸೆಡ್ಡೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಲಕ ಮೇಲೆ ಹೇಳಿದ ಕಾಳುಗಳನ್ನೆಲ್ಲಾ ಬೆರಸಿ ಕ್ರಮವಾಗಿ ಬಿಡುತ್ತಾರೆ. ಸಾಲು ಹಾಕಿ ಮುಗಿದ ಮೇಲೆ ಹಲುಬಿ ಹೊಡೆಯುತ್ತಾರೆ. ನೇಗಿಲಿನಿಂದ ಉತ್ತ ದಿಕ್ಕಿನಿಂದ ವಿರುದ್ಧ ದಿಕ್ಕಿನಲ್ಲಿ ಅಡ್ಡಡ್ಡವಾಗಿ ಹಲುಬಿ ಹೊಡೆಯಬೇಕು. ಒಂದು ಉಕ್ಕೆಯ ನಂತರ ಮತ್ತೊಂದು ಉಕ್ಕೆಯನ್ನು ಉಳುವಾಗಲೂ ಇದೇ ಕ್ರಮ ಅನುಸರಿಸುತ್ತಾರೆ. ಬಿತ್ತನೆಗೆ ಮುಂಚೆ ಸೆತ್ತೆ ತೆಗೆಯುವುದು, ಹೆಂಟೆ ಹೊಡೆಯುವುದು ಮುಂತಾದ ಕೆಲಸ ಗಳೂ ಇರುತ್ತವೆ.

ಬಿತ್ತಿದ ನಾಲ್ಕೈದು ದಿನಕ್ಕೆ ರಾಗಿ ಹುಟ್ಟಿ ಬರುತ್ತದೆ. ಅದು ಎರಡು ಮೂರು ಗರಿಯಾದ ಕೂಡಲೇ ಕುಂಟೆಯಿಂದ ಹರಗಬೇಕು. ಇದಕ್ಕೆ ನಾಲ್ಕು ಹಲ್ಲಿನ ಕುಂಟೆ ಉಪಯೋಗಿಸು ತ್ತಾರೆ. ಇದನ್ನು ಮೊದಲು ಉದ್ದುದ್ದವಾಗಿ ಅನಂತರ ಅಡ್ಡಡ್ಡ ವಾಗಿ ಹೊಡೆಯಬೇಕು. ಸಾಲುಗಳು ಬಂದಲ್ಲಿ ಕುಂಟೆಯನ್ನು ಎತ್ತಿ ಮತ್ತೆ ಮತ್ತೆ ಇಡಬೇಕು. ಬಿತ್ತನೆ ರಾಗಿಗೆ ಕುಂಟೆ ಹೊಡೆಯುವುದು ಸುಲಭದ ಕೆಲಸವಲ್ಲ. ಎಳೆಯ ರಾಗಿ ಸಸಿ ಗಳು ಹದವರಿತು ಉಳಿಯುವಂತೆಯೂ ಹೆಚ್ಚಿನವು ಕಿತ್ತು ಹೋಗುವಂತೆಯೂ ಮಾಡುವ ಏರ್ಪಾಡು. ಎರಡು ಮೂರು ಬಾರಿ ಕುಂಟೆ ಹೊಡೆಯುವ ಹೊತ್ತಿಗೆ ರಾಗಿಯ ಸಸಿಗಳು ನಾಲ್ಕೈದು ಎಲೆಯನ್ನು ಬಿಟ್ಟು ಬೆಳೆದಿರುತ್ತದೆ. ಇಲ್ಲಿಂದ ಮುಂದೆ ಕುಂಟೆ ಹೊಡೆಯುವುದಿಲ್ಲ. ಅನಂತರ ಕಳೆಕೀಳುವ ಕೆಲಸ ಆರಂಭವಾಗುತ್ತದೆ. ಕಳೆ ಬರುವುದನ್ನು ಅನುಸರಿಸಿ ಎರಡು ಮೂರು ಸಾರಿ ಕಳೆ ಕೀಳುತ್ತಾರೆ. ಇಷ್ಟು ಹೊತ್ತಿಗೆ ರಾಗಿ ಚೆನ್ನಾಗಿ ಬೆಳೆದಿರುತ್ತದೆ. ಆ ಸಂಬಂಧಿಸಿದ ವ್ಯವಸಾಯವೂ ಮುಗಿಯುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಟಿ ರಾಗಿ

ಇದು ರಾಗಿ ಬೇಸಾಯದಲ್ಲಿ ಹೆಚ್ಚಾಗಿ ಅನುಸರಿಸುವ ಪದ್ಧತಿ. ಬೀಜದ ರಾಗಿಯನ್ನು ಮೊದಲು ಒಟ್ಟಲು ಹಾಕುವುದು ಹಿಂದೆ ಹೇಳಿದಂತೆಯೇ ಕ್ರಮ. ಸಸಿ ಬಂದುದನ್ನು ನೋಡಿಕೊಂಡು ಹೊಲಗಳಿಗೆ ಗೊಬ್ಬರ ಚಲ್ಲಿ ಉತ್ತು ಹದ ಮಾಡುತ್ತಾರೆ. ಆಮೇಲೆ ಹಲುಬೆ ಹೊಡೆದು ಬಿಡುತ್ತಾರೆ. ಈ ತಯಾರಿಯೆಲ್ಲಾ ಮುಗಿದ ನಂತರ ಮಳೆ ಬಿದ್ದ ಬೆಳಿಗ್ಗೆ ಒಟ್ಟಲ ಸಸಿ ಕೀಳುತ್ತಾರೆ. ಗೆಣೆ ಹಲುಬೆಯಿಂದ ಉದ್ದ ಮತ್ತು ಆಗಲಕ್ಕೆ ಗೆಣೆ ಎಳೆಯುತ್ತಾರೆ. ಈ ಗೆರೆಗಳು ಕೂಡುವ ಜಾಗಕ್ಕೆ ಒಟ್ಟಲಿನಿಂದ ಕಿತ್ತು ತಂದ ಸಸಿಯನ್ನು ನೆಡುತ್ತಾರೆ. ಒಂದು ಗುಣಿಗೆ ನಾಲ್ಕೈದು ಸಸಿ ನೆಡಬಹುದು. ನಾಟಿ ನೆಡಲು ಆಳುಗಳು ಬೇಕಾಗುತ್ತದೆ. ಆರು ಗೆಣೆಗೆ ಒಂದರಂತೆ ಸಾಲು ಬಿಡಬೇಕು. ಆರು ಸಾಲಿನ ಅಂತರದಲ್ಲಿ ಇಬ್ಬರು ಆಳುಗಳು ಕುಳಿತುಕೊಂಡು ಉದ್ದಕ್ಕೂ ಸಸಿ ನೆಡುತ್ತಾ ಹೋಗುತ್ತಾರೆ. ಇಂತಹ ಇಬ್ಬರನ್ನು ಒಂದು ಸಾಲಿನ ಆಳು ಎಂದು ಕರೆಯುತ್ತಾರೆ. ಒಂದು ಎಕರೆ ರಾಗಿ ನಾಟಿ ಮಾಡಲು ಇಂತಹ ನಾಲ್ಕೈದು ಸಾಲಿನ ಆಳುಗಳು ಬೇಕಾಗುತ್ತದೆ. ರಾಗಿ ನಾಟಿ ಮುಗಿದ ಮೇಲೆ ಬಿಟ್ಟಿರುವ ಸಾಲುಗಳಿಗೆ ಬಿತ್ತನೆಯ ಪದ್ಧತಿಯಂತೆಯೇ ಸಾಲು ಹಾಕುತ್ತಾರೆ. ನಾಟಿ ರಾಗಿ ಹೆಚ್ಚು ಇಳುವರಿ ಕೊಡುತ್ತದೆಯಾದ್ದರಿಂದ ಈಗ ಅದೇ ಪ್ರಧಾನವಾದ ಪದ್ಧತಿಯಾಗಿದೆ.

ನಾಟಿಯಾದ ನಾಲ್ಕೈದು ದಿನಗಳ ನಂತರ ಕುಂಟೆ ಹೊಡೆಯಬೇಕು. ಮಳೆ ಕಡಿಮೆ ಇದ್ದು ತೇವಾಂಶ ಇಲ್ಲದಿದ್ದರೆ ನೆಟ್ಟ ಮೂರನೆಯ ದಿನವೇ ತರಗದಾಳು ಕುಂಟೆ ಹೊಡೆಯುತ್ತಾರೆ. ಎತ್ತು ಕಟ್ಟುವುದರ ಬದಲು ಯಾರಾದರೂ ವ್ಯಕ್ತಿಯೇ ಅದನ್ನು ಎಳೆಯುತ್ತಾನೆ. ಉದ್ದುದ್ದವಾಗಿ ಹೊಡೆಯುವ ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಂಟೆ ರಾಗಿ ಸಸಿಗಳ ಬುಡಕ್ಕೆ ಹುಡಿಮಣ್ಣನ್ನು ಒತ್ತರಿಸುತ್ತದೆ. ಸಾಮಾನ್ಯವಾಗಿ ಬೆಳಗಿನ ಹೊತ್ತು ಇದನ್ನು ಹೊಡೆಯುತ್ತಾರೆ. ಏಕೆಂದರೆ ಸಸಿಯು ತೇವಾಂಶ ಹಾಗೆಯೇ ಉಳಿಯಲಿ ಎಂದು. ಸಸಿಗಳು ಚೆನ್ನಾಗಿ ಬೇರು ಬಿಟ್ಟುಕೊಂಡು ಹಸಿರು ತಿರುಗಿದ ನಂತರ ಎರಡು ಹಲ್ಲಿನ ಕುಂಟೆಯಿಂದ ಹರಗುತ್ತಾರೆ. ಸಾಲುಗಳ ಮಧ್ಯೆ ಬೆಳೆಯುವ ಕಳೆ ಕೀಳಲು ಮತ್ತು ಭೂಮಿಯು ಮೇಲ್ಮೈ ಯಾವಾಗಲೂ ಮೃದುವಾಗಿರುವಂತೆ ಮಾಡಲು ಈ ಕುಂಟೆ ಹೊಡೆಯಬೇಕು. ಮೂರರಿಂದ ನಾಲ್ಕು ಬಾರಿ ಕುಂಟೆ ಹೊಡೆದ ನಂತರ ನಾಟಿ ರಾಗಿಯ ವ್ಯವಸಾಯ ಮುಗಿದಂತೆಯೇ ಸಾಮಾನ್ಯವಾಗಿ ನಾಟಿ ರಾಗಿಯ ಹೊಲಗಳಲ್ಲಿ ಕಳೆ ಕೀಳುವ ಪ್ರಮೇಯವಿರುವುದಿಲ್ಲ. ಕುಂಟೆಗೆ ಸಿಗದೆ ಉಳಿಯುವ ಒಂದೊಂದು ಕಳೆಯನ್ನು ಆಡ್ಡಾಡಿಕೊಂಡು ಕಿತ್ತುಹಾಕ ಬಹುದು. ನಾಟಿ ರಾಗಿಯ ಹೊಲಗಳಲ್ಲಿ ಸಾಲು ಹಾಕಿ ಬೆಳೆ ಯುವ ಉಪಬೆಳೆಗಳೊಂದಿಗೆ ಹುರುಳಿಯನ್ನು ಬಿತ್ತಿ ಬೆಳೆಯು ತ್ತಾರೆ. ಹುರುಳಿ ಬಿತ್ತುವ ಕಾಲ ಮಳೆ ಮಳೆಯಲ್ಲಿ. ಆಷ್ಟು ಹೊತ್ತಿಗೆ ರಾಗಿ ಚೆನ್ನಾಗಿ ಬೆಳೆದಿರುತ್ತದೆ. ರಾಗಿಯನ್ನು ಕೊಯ್ದ ನಂತರ ಹುರುಳಿ ಹುಲುಸಾಗಿ ಬೆಳೆಯುತ್ತದೆ. ರಾಗಿ ನಾಟಿಯ ಹೊಲಕ್ಕೆ ಹುರುಳಿಯನ್ನು ಬಿತ್ತಿ ಎರಡು ಹಲ್ಲಿನ ಕುಂಟೆ ಹೊಡೆ ಯುತ್ತಾರೆ. ಆದು ನಾಲ್ಕೈದು ದಿನದಲ್ಲಿ ಹುಟ್ಟಿ ಎಲೆಯೊಡೆಯು ತ್ತದೆ. ಆಲ್ಲಿಗೆ ಆದರ ವ್ಯವಸಾಯ ಮುಗಿಯುತ್ತದೆ.

ಕೂರಿಗೆ ರಾಗಿ ಬೆಳೆಯಲ್ಲಿ ಮತ್ತೊಂದು ವಿಧ. ಹೊಲ ವನ್ನು ಚೆನ್ನಾಗಿ ಉತ್ತು ಹದಮಾಡಿಕೊಳ್ಳಬೇಕು. ಬಿತ್ತನೆ ಮತ್ತು ನಾಟಿ ಮಾಡಲು ನೆಲದಲ್ಲಿ ಹದವಿಲ್ಲದಿದ್ದಾಗ ಕೂರಿಗೆ ರಾಗಿ ಹಾಕುವುದು ಪ್ರಶಸ್ತ. ಕೂರಿಗೆ ಎರಡಿನ ಉಕ್ಕೆಯಲ್ಲಿ ಬಿದ್ದ ರಾಗಿ ಅಲ್ಪಸ್ವಲ್ಪ ಹದದಲ್ಲಿಯೂ ಹುಟ್ಟುತ್ತದೆ. ಕೂರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗಿಯಲ್ಲಿಯೂ ಸಾಲು ಹಾಕುತ್ತಾರೆ. ಆದರೆ ಹುರುಳಿ ಹಾಕುವುದು ಅಪರೂಪ. ಕೂರಿಗೆಯಲ್ಲಿ ಏಕಮುಖದ ಸಾಲುಗಳು ಮಾತ್ರ ಇರುತ್ತವೆ. ರಾಗಿ ಹುಟ್ಟಿದ ಮೇಲೆ ಉದ್ದಕ್ಕೆ ತಗರದಾಳು ಮತ್ತೆ ಎರಡು ಹಲ್ಲಿನ ಕುಂಟೆ ಹೊಡೆಯುತ್ತಾರೆ. ಅಡ್ಡಕ್ಕೆ ನಾಲ್ಕು ಹಲ್ಲಿನ ಕುಂಟೆ ಹೊಡೆಯುವುದೂ ಉಂಟು. ಮೂರು ನಾಲ್ಕು ಕುಂಟೆಯಾದ ಮೇಲೆ ಕಳೆ ತೆಗೆಸಬೇಕಾಗುತ್ತದೆ. ಬಿತ್ತನೆಗಿಂತ ಕಡಿಮೆ ಕಳೆ ಇದ್ದರೂ ನಾಟಿ ರಾಗಿಗಿಂತ ಹೆಚ್ಚಿರುತ್ತದೆ.

ಗುಣಿರಾಗಿ ನಾಟಿರಾಗಿಯನ್ನೇ ಹೋಲುತ್ತದೆ. ಉತ್ತು ಹದಮಾಡಿ ಹಲುಬೆ ಹೊಡೆದ ಭೂಮಿಗೆ ಗೆಣೆ ಎಳೆಯುತ್ತಾರೆ. ಆ ಗೆರೆಗಳು ಕೂಡುವ ಕಡೆಗಳಲ್ಲಿ ಗುಣಿ ದೊಣ್ಣೆಯಿಂದ ಕುಳಿ ಮಾಡುತ್ತಾರೆ. ಆದರಲ್ಲಿ ರಾಗಿಯನ್ನು ಉದುರಿಸುತ್ತಾರೆ. ಈ ರಾಗಿಗೆ ಹಣ್ಣು ಗೊಬ್ಬರವನ್ನು ಬೆರೆಸಿಕೊಂಡಿರುತ್ತಾರೆ. ರಾಗಿ ಹುಟ್ಟಿದ ಮೇಲೆ ಮೊದಲು ತಗರದಾಳು ಕುಂಟೆಯನ್ನೂ ಆನಂತರ ಎರಡು ಹಲ್ಲಿನ ಕುಂಟೆಯನ್ನೂ ಹೊಡೆಯಬೇಕು. ಗುಣಿರಾಗಿಯ ವ್ಯವಸಾಯ ನಾಟಿರಾಗಿಯ ವ್ಯವಸಾಯದಂತೆಯೇ ಇರುತ್ತದೆ.ಉತ್ತು ಹದಮಾಡಿದ ಹೊಲಗಳಲ್ಲಿ ಉದ್ದಾಗಲಕ್ಕೆ ಗೆಣೆ ಎಳೆದು ನೆಡುವ ಪದ್ಧತಿ ಅತ್ಯಂತ ಜನಪ್ರಿಯವಾದುದಾಗಿದೆ. ಈಗ ಗುಣಿರಾಗಿಯ ಬೇಸಾಯ ಅಷ್ಟೇನೂ ಪ್ರಚಾರದಲ್ಲಿಲ್ಲ.

ರಾಗಿ ಸಾಮಾನ್ಯವಾಗಿ ಹಾಕಿದಾಗಿನಿಂದ ನಾಲ್ಕೂವರೆ ಐದು ತಿಂಗಳಿಗೆ ಕಟಾವಿಗೆ ಬರುತ್ತದೆ. ಮುಂಗಾರು ಅಥವಾ ಗಿಡ್ಡರಾಗಿ ಆಗಷ್ಟ್ ತಿಂಗಳಿನಲ್ಲಿ ಕಟಾವಿಗೆ ಬರುತ್ತದೆ. ಹೈನು ರಾಗಿ ನವೆಂಬರ್–ಡಿಸೆಂಬರ್ ತಿಂಗಳಿನಲ್ಲಿ ಕಟಾವಿಗೆ ಬರುತ್ತದೆ. ಬೇಸಿಗೆ ರಾಗಿಯನ್ನು ಸಾಮಾನ್ಯವಾಗಿ ಫೆಬ್ರುವರಿ ತಿಂಗಳಿನಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಟಿ ಹಾಕುತ್ತಾರೆ. ಹೈನುರಾಗಿಯನ್ನುಳಿದು ಮಿಕ್ಕವನ್ನು ಬಿತ್ತುವುದು ಅಪರೂಪ. ಕೂರಿಗೆಯೂ ಇಲ್ಲವೆಂದೇ ಹೇಳ ಬಹುದು. ಕಟಾವಿಗೆ ಬಂದಾಗ ರಾಗಿಯ ತೆನೆ ಮಾಗಿ ಹಣ್ಣಾ ಗಿರುತ್ತದೆ. ಮುಂಗಾರು ಮತ್ತು ಬೇಸಿಗೆ ರಾಗಿಯ ತೆನೆಯನ್ನು ಕೊಯ್ದು ತರುತ್ತಾರೆ. ಆದರೆ ಈಗೀಗ ಹೆಚ್ಚು ಬೆಳೆಯುವುದ ರಿಂದ ಬುಡಕ್ಕೆ ಕೊಯ್ಯುವುದೇ ರೂಢಿ. ಕೊಯ್ದ ರಾಗಿ ಮಳೆಯ ಹೆದರಿಕೆ ಇಲ್ಲದಿದ್ದರೆ ಎರಡು ಮೂರು ದಿನ ಹೊಲ ದಲ್ಲಿಯೇ ಒಣಗುತ್ತದೆ. ಅನಂತರ ಅದನ್ನು ಹೊರೆಕಟ್ಟಿ ಹೊಲದ ಹತ್ತಿರದ ಅರೆಕಲ್ಲುಗಳ ಮೇಲೆ ಬೀಸಿಗೆ ಹಾಕುತ್ತಾರೆ. ಅರೆ ಇಲ್ಲದವರು ತಮ್ಮ ಹೊಲದಲ್ಲಿಯೇ ಆಟ್ಟಣಿ ಹಾಕಿ ಒಟ್ಟುತ್ತಾರೆ. ಬೀಸಿಗೆ ಎಂದರೆ ಸುಮಾರು ಹತ್ತು ಅಡಿ ಉದ್ದ ಮತ್ತು ಆರು ಅಡಿ ಎತ್ತರದ ಒಟ್ಟುವ ಒಂದು ಕ್ರಮ. ಕೊಯ್ಲಿನ ಕಾಲದಲ್ಲಿ ಕೆಲಸ ಅವಸರವಿರುವುದರಿಂದ ಅಲ್ಲಲ್ಲಿಯೇ ಅದರ ವ್ಯವಸ್ಥೆ ಮಾಡಿರುತ್ತಾರೆ. ಕೊಯ್ಲಿನ ಕೆಲಸ ಮುಗಿದ ಮೇಲೆ ಕಣ ಮಾಡಿ ಅಲ್ಲಿಗೆ ಎಲ್ಲಾ ಕಡೆಯ ಹುಲ್ಲನ್ನೂ ತಂದು ದೊಡ್ಡ ಮೆದೆಯನ್ನು ಒಟ್ಟುತ್ತಾರೆ. ಒಂದು ದೊಡ್ಡ ಮೆದೆ ನೂರು ಆಡಿ ಸುತ್ತಳತೆ ಮತ್ತು ಮುವ್ವತ್ತು ನಲವತ್ತು ಅಡಿ ಎತ್ತರವಿರುತ್ತದೆ. ಹೈನುರಾಗಿಗೆ ಮಾತ್ರ ಇಂತಹ ಕಣವನ್ನು ಮಾಡುತ್ತಾರೆ. ಮುಂಗಾರು ಮತ್ತು ಬೇಸಿಗೆಯ ರಾಗಿಯನ್ನು ಆರೆಗಳ ಮೇಲೆ ಬಡಿದು ತರುತ್ತಾರೆ. ಇದಕ್ಕೆ ಕಾರಣ ಈ ರಾಗಿ ಅಲ್ಪ ಪ್ರಮಾಣ ದಲ್ಲಿರುತ್ತದೆ. ಹಾಸನ, ಚಿಕ್ಕಮಗಳೂರು ಮತ್ತು ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣಗಳ ಕಡೆ ರಾಗಿಯನ್ನು ಮುಂಗಾರಿನಲ್ಲಿಯೇ ಪ್ರಧಾನವಾಗಿ ಬೆಳೆಯುತ್ತಾರೆ. ಆದರೆ ಬಡಿಯಲು ಮಳೆಗಾಲ ಕಳೆಯುವವರೆಗೆ ಮೈದೆ ಹಾಕಿ ಬಿಟ್ಟಿರು ತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗಿಯ ವ್ಯವಸಾಯ ಪದ್ಧತಿಯಲ್ಲಿ ಗೊಬ್ಬರ ಮುಖ್ಯ ಪಾತ್ರವಹಿಸುತ್ತದೆ. ರೈತರು ಸಾಮಾನ್ಯವಾಗಿ ದನ, ಎಮ್ಮೆ, ಆಡು, ಕುರಿಗಳನ್ನು ಸಾಕುತ್ತಾರೆ. ತಮ್ಮ ಹೊಲಗಳಿಗೆ ಗೊಬ್ಬರ ಕ್ಕಾಗಿ ದನ ಸಾಕುವವರೂ ಉಂಟು. ಪ್ರತಿ ದಿನ ಹಟ್ಟಿಯಿಂದ ಗುಡಿಸಿ ತೆಗೆದ ಕಸವನ್ನು ಹೊಲದ ಒಂದು ಮೂಲೆಯಲ್ಲಿ ರಾಶಿಹಾಕುತ್ತಾರೆ. ಇದನ್ನು ತಿಪ್ಪೆ ಎಂದು ಕರೆಯುತ್ತಾರೆ. ಆ ಹೊಲಕ್ಕೆ ಎಷ್ಟು ಗೊಬ್ಬರ ಬೇಕೋ ಅದರ ಅಂದಾಜಿನಲ್ಲಿ ತಿಪ್ಪೆಯ ಗಾತ್ರವಿರುತ್ತದೆ. ಮೊದಲ ಮಳೆ ಬಿದ್ದಾಗ ಈ ತಿಪ್ಪೆ ಯನ್ನು ಮಣ್ಣಿನಿಂದ ಮುಚ್ಚುತ್ತಾರೆ. ಆಗ ಒಳಗೆ ಗೊಬ್ಬರ ಶಾಖಹುಟ್ಟಿ ಹಣ್ಣಾಗುತ್ತದೆ. ಮುಂದೆ ಕೊನೆಯ ಉಕ್ಕೆಯಲ್ಲಿ ಅದನ್ನು ಹೊಲದಲ್ಲಿ ಚೆಲ್ಲಿ ಉಳುತ್ತಾರೆ. ಈಗೀಗ ಗೊಬ್ಬರ ವನ್ನು ತಿಪ್ಪೆ ಹಾಕುವ ಬದಲು ಆಳವಾದ ಗುಂಡಿಯಲ್ಲಿ ಶೇಖ ರಿಸುವುದು ಹೆಚ್ಚು. ಆಧುನಿಕ ಕಾಂಪೋಸ್ಟ್ ಗೊಬ್ಬರದ ಗುಂಡಿ ನಮ್ಮಲ್ಲಿ ಅತ್ಯಂತ ಪ್ರಾಚೀನವಾದುದು. ಮನೆಯಲ್ಲಿ ದನಕರು ಗಳು ಕಡಿಮೆ ಇರುವವರು ಈ ಗುಂಡಿಗೆ ಸೊಪ್ಪುಸೆದೆ ಮತ್ತು ಫಲವತ್ತಾದ ಮಣ್ಣನ್ನೂ ಹಾಕಿ ಗೊಬ್ಬರ ಮಾಡಿಕೊಳ್ಳು ತ್ತಾರೆ. ಬೇಸಿಗೆಯಲ್ಲಿ ಕೆರೆಯ ನೀರು ಬತ್ತಿದರೆ ತಮ್ಮ ಹೊಲ ಗಳಿಗೆ ಗೋಡು ಎಂಬ ಕೆರೆಯ ತಳದ ಮೆಕ್ಕಲು ಮಣ್ಣನ್ನು ಗಾಡಿಗಳಲ್ಲಿ ಹೊಡೆಯುತ್ತಾರೆ. ರಾಗಿ ಬೆಳೆಗೆ ಇದು ಉತ್ಕೃಷ್ಟ ವಾದ ಗೊಬ್ಬರ ಎಂಬ ನಂಬಿಕೆಯಿದೆ.

ರಾಗಿಗೆ ಬರುವ ರೋಗಗಳು ನಮ್ಮಲ್ಲಿ ಕಡಿಮೆ. ಸ್ಥಳೀಯ ಪದ್ಧತಿ ಮತ್ತು ಬೀಜಗಳಿಂದ ವ್ಯವಸಾಯ ಮಾಡುವವರಿಗೆ ರೋಗದ ಭಯವಿಲ್ಲ. ಏಕೆಂದರೆ ಇವು ಇಲ್ಲಿನ ವಾಯುಗುಣಕ್ಕೆ ಹೊಂದಿಕೊಂಡಂತಹವು. ಆದುದರಿಂದಲೇ ರೈತರನ್ನು ಹೊಸ ರೀತಿಗೆ ಎಳೆಯುವುದು ಕಷ್ಟವಾಗಿದೆ. ಈಗ ರಸಾಯನಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೊಬ್ಬರ ಉಪಯೋಗಿಸಿ ಬೆಳೆಯುವ ಹಲವಾರು ಹೊಸ ತಳಿಯ ರಾಗಿಗಳು ಬಂದಿವೆ. ಹೆಚ್ಚು ಇಳುವರಿ ನೀಡುವುದರಿಂದ ಅವುಗಳೂ ಕ್ರಮಕ್ರಮವಾಗಿ ಜನಪ್ರಿಯವಾಗುತ್ತಿವೆ.

ಜೋಳ

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಜೋಳ ಪ್ರಮುಖವಾದ ಬೆಳೆ. ದಕ್ಷಿಣ ಕರ್ನಾಟಕದ ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಜೋಳ ಪ್ರಧಾನ ಬೆಳೆಯಾಗಿದೆ. ಕರ್ನಾಟಕದಲ್ಲಿ ಸುಮಾರು 26 ಲಕ್ಷ ಹೆಕ್ಟೇರುಗಳಲ್ಲಿ ಜೋಳ ಬೆಳೆಯುವರೆಂದು ಅಂದಾಜು ಮಾಡಲಾಗಿದೆ. ಜೋಳ ಅಕ್ಕಿಗಿಂತ ಹೆಚ್ಚು ಸಸಾರಜನಕ ಮತ್ತು ಗೋದಿಗಿಂತ ಹೆಚ್ಚು ಪಿಷ್ಟವನ್ನು ಹೊಂದಿದೆ. ಆದುದರಿಂದ ಇದು ಉತ್ತಮ ಆಹಾರವೆನಿಸಿದೆ. ಜೋಳದ ಕಡ್ಡಿ ದನಗಳಿಗೆ ಆ ಹಾ ರ ವೂ ಆಗುತ್ತದೆ. ಜೋಳವನ್ನು ಸಾಮಾನ್ಯವಾಗಿ ಮುಂಗಾರು ಮತ್ತು ಹಿಂಗಾರು ಬೆಳೆಯಾಗಿ ಬೆಳೆಯುತ್ತಾರೆ. ಇದು ಪ್ರಧಾನವಾಗಿರುವ ಕಡೆಗಳಲ್ಲಿ ಹಿಂಗಾರಿ ಬೆಳೆಯಾಗಿಯೇ ಬೆಳೆಯುವುದು ಹೆಚ್ಚು. ಮಿಕ್ಕ ಕಡೆ ಮುಂಗಾರಿ ಬೆಳೆಯಾಗಿ ಅಲ್ಪ ಸ್ವಲ್ಪ ಮಾತ್ರ ಬೆಳೆಯುತ್ತಾರೆ. ಈಗ ಹೈಬ್ರೀಡ್ ತಳಿಗಳು ಬಂದು ಗದ್ದೆಗಳಲ್ಲಿಯೂ ಉಪಬೆಳೆಯಾಗಿ ಬೆಳೆಯುತ್ತಾರೆ.

ಜೋಳ ಒಣ ಬೆಳೆಯಾಗಿ ಬೆಳೆಯುತ್ತದೆ. ಬಿತ್ತಿದಾಗಿನಿಂದ ಕೊಯ್ಲಿನವರೆಗೆ ನಾಲ್ಕೈದು ಹದ ಮಳೆ ಬಂದರೆ ಸಾಕು. ಜೋಳದ ವ್ಯವಸಾಯದಲ್ಲಿ ಬಿತ್ತನೆ ಮತ್ತು ಸಾಲೇ ಹೆಚ್ಚು. ಮುಂಗಾರು ಮಳೆ ಬಿದ್ದೊಡನೆಯೇ ಹೊಲಗಳನ್ನು ಎರಡು ಮೂರು ಉಕ್ಕೆ ಉಳುತ್ತಾರೆ. ಜೋಳದ ಹೊಲಗಳಲ್ಲಿ ಗರಿಕೆ ಬೆಳೆಯುವುದು ಹೆಚ್ಚು. ಉತ್ತು ಅದನ್ನೆಲ್ಲಾ ಆಯ್ದು ತೆಗೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಾರೆ. ಜೋಳಕ್ಕೆ ಹೆಚ್ಚು ಗೊಬ್ಬರವೂ ಬೇಕಾಗುವುದಿಲ್ಲ. ಎರಡನೆಯ ಉಕ್ಕೆಯಲ್ಲಿ ಗೊಬ್ಬರ ಚೆಲ್ಲುತ್ತಾರೆ. ಒಂದು ಎಕರೆಗೆ ನಾಲ್ಕೈದು ಗಾಡಿಯಷ್ಟು ಗೊಬ್ಬರವಾದರೆ ಉತ್ತಮವಾದ ಫಸಲು ಬರುತ್ತದೆ. ಮೂರನೆಯ ಉಕ್ಕೆಯಾದ ನಂತರ ಮಳೆ ಬಿದ್ದಾಗ ಹದ ನೋಡಿ ಜೋಳ ಬಿತ್ತುತ್ತಾರೆ. ರಾಗಿಯಂತೆಯೇ ಒಂದು ಕಡೆಯಿಂದ ಕ್ರಮವಾಗಿ ಚೆಲ್ಲಿ ಉಳುತ್ತಾರೆ ಆಮೇಲೆ ಹಲುಬೆ ಹೊಡೆಯುತ್ತಾರೆ. ಜೋಳವೇ ಪ್ರಧಾನ ಬೆಳೆಯಾದ ಪ್ರದೇಶಗಳಲ್ಲಿ ತೊಗರಿ, ಹಲಸಂದೆ ಮುಂತಾದುವನ್ನು ಸಾಲು ಹಾಕುತ್ತಾರೆ. ಸೆಡ್ಡಿ ಜೋಳ ಮತ್ತು ಗುಣಿಜೋಳಗಳ ವ್ಯವ ಸಾಯವೂ ಇದೆ. ನೇಗಿಲಿನಿಂದ ನೇರ ಸಾಲುಗಳನ್ನು ಹೊಡೆ ಯುತ್ತಾ ಹಿಂದೆ ಸೆಡ್ಡಿಯಲ್ಲಿ ಜೋಳ ಉದುರಿಸುತ್ತಾರೆ. ರಾಗಿ ನಾಟಿಯಂತೆ ಗೆಣೆ ಎಳೆದು ಗೆರೆಗಳು ಕೂಡುವ ಜಾಗದಲ್ಲಿ ಜೋಳದ ಕಾಳು ಹಾಕುತ್ತಾರೆ. ಸಾಲು ಜೋಳ ಮತ್ತು ಗುಣಿ ಜೋಳಗಳಿಗೆ ಹೊಸ ತಳಿಗಳನ್ನು ಉಪಯೋಗಿಸುತ್ತಾರೆ. ವ್ಯವ ಸಾಯಕ್ಕೆ ಅನುಕೂಲವಾದುದರಿಂದ ಈ ಪದ್ಧತಿ ಉತ್ತರ ಕರ್ನಾಟಕ ಭಾಗದಲ್ಲಿ ಈಗ ಜನಪ್ರಿಯವಾಗುತ್ತಿದೆ. ಬಿತ್ತಿದ ನಾಲ್ಕೈದು ದಿನಕ್ಕೆ ಜೋಳ ಹುಟ್ಟಿ ಮೇಲೆ ಬರುತ್ತದೆ. ಆಗ ಸುಳಿಯೂ ಸೇರಿದಂತೆ ಮೂರು ಎಲೆಗಳಿರುತ್ತವೆ. ಬಿತ್ತಿದ ಹತ್ತು ಹದಿನೈದು ದಿವಸಗಳ ನಂತರ ಬಿತ್ತಿದ ಜೋಳದ ಹೊಲ ಗಳಿಗೆ ಹಲುಬೆ ಹೊಡೆಯುತ್ತಾರೆ. ಮಳೆ ಬಿದ್ದು ಮತ್ತು ಬಿತ್ತಿ ಉಳುವಾಗ ಓಡಾಡಿ ಭೂಮಿ ಘಟ್ಟಿಯಾಗಿರುತ್ತದೆ. ಹಲುಬೆ ಭೂಮಿಯ ಮೇಲ್ಪದರವನ್ನು ಕಿತ್ತು ಸಡಿಲಗೊಳಿಸುತ್ತದೆ. ಇದರಿಂದ ಎರಡು ಉಪಯೋಗವಿದೆ. ಒಂದು ಮೇಲ್ಪದರ ಸಡಿಲವಾಗುವುದರಿಂದ ಮಳೆ ಬರುವುದು ತಡವಾದರೂ ಪೈರು ಒಣಗುವುದಿಲ್ಲ. ಮಳೆ ಬಂದರೆ ನೀರನ್ನು ಚೆನ್ನಾಗಿ ಹೀರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಲು ಮತ್ತು ಗುಣಿಜೋಳಗಳಿಗೆ ಕುಂಟೆ ಹೊಡೆಯುತ್ತಾರೆ. ಜೋಳದ ಹೊಲವನ್ನು ನೇಗಿಲಿನಿಂದ ಉಳುವುದೂ ಉಂಟು. ಜೋಳ ಬೇಗ ಎತ್ತರಕ್ಕೆ ಬೆಳೆದುಬಿಡುತ್ತದೆ. ಆಧುನಿಕ ತಳಿಗಳನ್ನು ಬಿಟ್ಟರೆ ಸ್ಥಳೀಯ ತಳಿಗಳೆಲ್ಲಾ ಆರೇಳು ಅಡಿಗೂ ಹೆಚ್ಚು ಎತ್ತರ ಬೆಳೆಯುತ್ತವೆ. ಒಳ್ಳೆಯ ಜೋಳದ ಹೊಲ ಕಬ್ಬಿನ ಗದ್ದೆಯಂತೆ ಕಾಣುವುದುಂಟು. ಬೇಗ ಬೆಳೆಯುವುದರಿಂದ ಕಳೆಗಳಿಂದ ಈ ಬೆಳೆಗೆ ಹೆಚ್ಚು ಉಪಟಳವಿಲ್ಲ. ಆದರೂ ಒಂದೆರಡು ಬಾರಿಯಾದರೂ ಕಳೆ ತೆಗೆಯುತ್ತಾರೆ. ಆಲ್ಲಿಗೆ ಆದರ ವ್ಯವಸಾಯ ಮುಗಿಯುತ್ತದೆ.

ಜೋಳದ ಬೆಳೆ ಮೂರು ತಿಂಗಳಿಂದ ನಾಲ್ಕು ತಿಂಗಳಲ್ಲಿ ಬರುತ್ತದೆ. ಈಗೀಗ ಬೇಗ ಮೂರೇ ತಿಂಗಳಿಗೆ ಬರುವ ತಳಿಗಳೂ ಬರುತ್ತಿವೆ. ಜೋಳ ತೆನೆಯೊಡೆದು ಹಾಲು ತುಂಬಿದಾಗ ಹಕ್ಕಿಗಳ ಹೊಡೆತ ವಿಪರೀತ. ಸಣ್ಣ ಹಕ್ಕಿಗಳ ಗುಂಪುಗುಂಪು ತೆನೆಯ ಮೇಲೆ ಕುಳಿತು ಹಾಲು ಕುಡಿದುಬಿಡುತ್ತವೆ. ಆದುದರಿಂದ ಹೊಲಗಳಲ್ಲಿ ಅಟ್ಟಣೆ ಹಾಕಿ ಹಕ್ಕಿ ಕಾಯುತ್ತಾರೆ. ಆಧುನಿಕ ಜೋಳದಂತೆಯೇ ಸ್ಥಳೀಯ ಜೋಳದಲ್ಲಿಯೂ ಕೆಲವು ಜಾತಿಗಳಿವೆ. ಬಿಳಿಜೋಳ, ಕೆಂಪುಜೋಳ, ವಗರುಜೋಳ. ಬಿಳಿಜೋಳದ ಕಾಳುಗಳು ಮುತ್ತಿನಂತೆ ಬೆಳ್ಳಗಿರುತ್ತವೆ. ಆಹಾರವಾಗಿ ಇದು ಉತ್ತಮ ದರ್ಜೆಯದು ಎನಿಸಿದೆ. ಕೆಂಪು ಜೋಳಕ್ಕೆ ಹಕ್ಕಿಗಳ ಕಾಟವಿರುವುದಿಲ್ಲ. ಕಾರಣ ಅದು ಹೊರಗೆ ಕಾಣುವುದಿಲ್ಲ. ಜೊತೆಗೆ ತೆನೆ ಬಿಳಿಯದರಂತೆ ಗುಪ್ಪೆಯಾಗಿರದೆ ಬಿಡಿಯಾಗಿರುತ್ತದೆ. ವಗರು ಜೋಳ ದನಗಳ ಆಹಾರವಾಗಿ ಮಾತ್ರ ಬೆಳೆಯುವ ಬೆಳೆ. ಇವನ್ನು ರಾಗಿಯ ಹೊಲಗಳ ಸಾಲಿನಲ್ಲಿ ಬೆಳೆಯುತ್ತಾರೆ. ಕೆಲವು ನಿರ್ದಿಷ್ಟವಾದ ಪ್ರದೇಶದಲ್ಲಿ ದಟ್ಟವಾಗಿ ಬಿತ್ತಿ ಪಶುಗಳ ಆಹಾರವಾಗಿ ಉಪಯೋಗಿಸುತ್ತಾರೆ.

CC-O. Vasishtha Tripathi Collection. Digitized by eGangotri

CC-O. In Public Domain. Digitized by eGangotri



ಜೋಳ

ಆಧುನಿಕ ತಳಿಗಳಲ್ಲಿ ಅನೇಕ ವಿಧಗಳಿವೆ. ಅವುಗಳಿಗೆಲ್ಲಾ ಅಂಕೆ ಗಳಿವೆ. ಮುಸುಕಿನ ಜೋಳವೊಂದನ್ನು ಹೆಸರಿನಿಂದಲೂ ಕರೆಯುತ್ತಾರೆ. ಇದನ್ನು ನಮ್ಮವರು ಹಲ್ಲಿನಜೋಳ ಎಂದೂ ಕರೆಯುತ್ತಾರೆ. ಕಾರಣ ಇದರ ಕಾಳು ದವಡೆಯ ಹಲ್ಲಿನಾಕಾರ ವಾಗಿರುತ್ತದೆ.

ಬೆಳೆ ಪೂಗಿದ ಮೇಲೆ ಕೊಯ್ದು ಹೊಲಗಳಲ್ಲಿಯೇ ಮೆದೆ ಹಾಕುತ್ತಾರೆ. ಅದು ಅಲ್ಲಿ ಚೆನ್ನಾಗಿ ಪೂಗಿದ ಮೇಲೆ ಮೆದೆ ಕಿತ್ತು ತೆನೆಕೊಯ್ದು ಕಣದಲ್ಲಿ ತೆನೆಯನ್ನು ತಂದು, ಜೋಳವನ್ನು

Sri Vidyaranya Book Depot, Bangalore

CC-O. In Public Domain. Digitized by eGangotri



ಮುಸುಕಿನ ಜೋಳ

ಬಡಿಯುವ, ತುಳಿಸುವ ಮತ್ತು ರೋಣು ಹೊಡೆಯುವ ಕ್ರಮ ಗಳಿವೆ. ಕಡಿಮೆ ಬೆಳೆದವರು ಕೋಲುಗಳಿಂದ ಬಡಿದು ಒಕ್ಕಣೆ ಮಾಡುತ್ತಾರೆ. ಹೆಚ್ಚು ಬೆಳೆದವರು ದನಗಳ ಎಣೆಕಟ್ಟಿ ತುಳಿಸು ತ್ತಾರೆ. ಅಥವಾ ರೋಣುಗಲ್ಲು ಹೊಡೆದು ಉದುರಿಸುತ್ತಾರೆ.

ಬತ್ತ

ಕರಾವಳಿ, ಮಲೆನಾಡು ಮತ್ತು ದಕ್ಷಿಣ ಮೈದಾನ ಪ್ರದೇಶದಲ್ಲಿ ಬತ್ತ ಪ್ರಧಾನ ಬೆಳೆಯಾಗಿದೆ. ಉತ್ತರ ಮೈದಾನ

CC-O. Vidyabharathi Book Centre, Sringeri.

CC-0. In Public Domain. Digitized by eGangotri

ಪ್ರದೇಶದಲ್ಲಿಯೂ ಈಗ ಅನೇಕ ನೀರಾವರಿ ಯೋಜನೆಗಳಾಗಿರುವುದರಿಂದ ಅಲ್ಲಿಯೂ ಬೆಳೆಯುತ್ತದೆ. ವರ್ಷದ ಮೂರು ಕಾಲದಲ್ಲಿಯೂ ಮುಂಗಾರು ಹಿಂಗಾರು ಮತ್ತು ಬೇಸಿಗೆ ಬೆಳೆಯಾಗಿ ಬತ್ತವನ್ನು ಬೆಳೆಯುತ್ತಾರೆ. ಬತ್ತ ಮೂರು ತಿಂಗಳಿನಿಂದ ಐದು ತಿಂಗಳಿನವರೆಗೆ ಕಟಾವಿಗೆ ಬರುವ ವಿವಿಧ ತಳಿಗಳನ್ನು ಹೊಂದಿದೆ. ದೊಡ್ಡಿಬತ್ತ, ಬರಬತ್ತ, ಪುಟ್ಟಬತ್ತ, ಸಣ್ಣಬತ್ತ, ತಿರುಗನಹಳ್ಳಿಸಣ್ಣ, ಕೊಯಮತ್ತೂರುಸಣ್ಣ – ಇವು ಅಪ್ಪಟ ಸ್ಥಳೀಯ ತಳಿಗಳು. ರಾಜಮುಡಿ, ಜೇನುಗೂಡು, ಬಂಗಾರಸಣ್ಣ–ಇವು ಹೊಸದಾಗಿ ಬಂದು ಈಗ ಹಳೆಯದಾಗುತ್ತಿರುವ ತಳಿ. ಜಯ, ಪಿ. ಆರ್. 8, ಪಿ. ಆರ್. 20, ಎಂ. ಆರ್. 136, ಮಧು ಇವು ಅಧಿಕ ಇಳುವರಿಯ ಆಧುನಿಕ ತಳಿಗಳು. ಬತ್ತ ತೆಂಡೆಯಾಗಿ ಬೆಳೆಯುವ ಹುಲ್ಲು ಜಾತಿಯ ಸಸ್ಯ. ಮೂರು ನಾಲ್ಕು ಅಡಿ ಎತ್ತರದವರೆಗೆ ಬೆಳೆಯುವ ಸ್ಥಳೀಯ ತಳಿಗಳಿವೆ. ಆಧುನಿಕ ತಳಿಗಳು ಒಂದೂವರೆ ಅಡಿಗಿಂತ ಉದ್ದ ಬೆಳೆಯುವುದಿಲ್ಲ. ಕರ್ನಾಟಕದ ಆಹಾರ ಪದ್ಧತಿಯಲ್ಲಿ ಅಕ್ಕಿ ಪ್ರಮುಖ ಸ್ಥಾನವನ್ನು ಪಡೆದಿದೆ.

ಬತ್ತದ ವ್ಯವಸಾಯದಲ್ಲಿ ಬಿತ್ತನೆ, ಸಾಲು, ನಾಟಿ, ಮಳೆ ಎಂದು ಕೆಲವು ಪದ್ಧತಿಗಳಿವೆ. ಬಿತ್ತನೆ ಎಂದರೆ ಬತ್ತವನ್ನು ಗದ್ದೆಯಲ್ಲಿ ಒಂದು ಹದವರಿತು ಬಿತ್ತುವುದು. ಮುಂಗಾರು ಮಳೆ ಬಿದ್ದ ಕೂಡಲೆ ಗದ್ದೆಗಳನ್ನು ಉಳಲು ಆರಂಭಮಾಡುತ್ತಾರೆ. ತಮಗಿರುವ ಎಲ್ಲಾ ಗದ್ದೆಗಳನ್ನೂ ಒಂದು ಕಡೆಯಿಂದ ಉತ್ತುಕೊಂಡು ಬರುತ್ತಾರೆ. ಮೂರನೆಯ ಉಕ್ಕೆಯಲ್ಲಿ ಗೊಬ್ಬರ ಚಲ್ಲುತ್ತಾರೆ. ಬತ್ತಕ್ಕೆ ಗೊಬ್ಬರ ಹೆಚ್ಚಾಗಿ ಬೇಕಾಗುತ್ತದೆ. ಸರಿಯಾದ ಫಸಲು ತೆಗೆಯಲು ಎಕರೆಗೆ ಹತ್ತರಿಂದ ಹನ್ನೆರಡು ಗಾಡಿ ಹಟ್ಟಿಯ ಗೊಬ್ಬರ ಹಾಕಬೇಕು. ಭರಣಿ ಮಳೆ

CC-0. Jangamwadi Math Collection. Digitized by eGangotri
Sri Vidyabhiraathi Book Centre, Shringeri

CC-O. In Public Domain. Digitized by eGangotri

ಬತ್ತ

ಯಲ್ಲಿ ಬಿತ್ತನೆ ಮತ್ತು ಸಾಲು ಬತ್ತಗಳನ್ನು ಹಾಕುವ ಕಾಲ. ಉತ್ತು, ಗೊಬ್ಬರ ಚೆಲ್ಲಿ ಹದಮಾಡಿದ ಗದ್ದೆಗೆ ಬತ್ತ ಬಿತ್ತುತ್ತಾರೆ. ಹಿಂದಿನಿಂದ ಉತ್ತು, ಹಲುಬೆ ಹೊಡೆಯುತ್ತಾರೆ. ಕಾಳುಗಳು ಮಣ್ಣಿನೊಳಗೆ ಹೋಗಲು ಈ ಕ್ರಮ. ದಕ್ಷಿಣ ಕನ್ನಡ ಮತ್ತು ಮಲೆನಾಡು ಭಾಗದಲ್ಲಿ ಬಿತ್ತನೆ ಹೆಚ್ಚು. ಏಕೆಂದರೆ ಅಲ್ಲಿ ಬತ್ತ ಮಳೆಯ ನೀರಿನಿಂದ ಮಾತ್ರ ಬೆಳೆಯುತ್ತದೆ. ಖಾಯಂ ನೀರಾವರಿಯ ಪ್ರದೇಶದಲ್ಲಿ ಬಿತ್ತನೆ ಮಾಡುವುದಿಲ್ಲ.

ಹಳೇ ಮೈಸೂರು ಭಾಗದಲ್ಲಿಯೂ ಮಳೆ ಆಶ್ರಯದಲ್ಲಿ ಬತ್ತ ಬೆಳೆಯುತ್ತಾರೆ. ಇಲ್ಲಿ ಮಲೆನಾಡು ಮತ್ತು ಕರಾವಳಿಯಷ್ಟು ಮಳೆಯಾಗುವುದಿಲ್ಲ. ಆದುದರಿಂದ ಅಲ್ಲಿಗಿಂತ ಕಡಿಮೆ ಮಳೆಗೆ ಬೆಳೆಯುವ ತಳಿಗಳನ್ನು ಈ ಭಾಗದಲ್ಲಿ ಹಾಕುತ್ತಾರೆ. ಇದನ್ನು ಬರಬತ್ತ ಎಂದು ಕರೆಯುತ್ತಾರೆ. "ಭರಣಿ ಮಳೆಯಲ್ಲಿ ಬತ್ತ ಹಾಕಿ ವೈಗಾಖ ಮಳೆಯಲ್ಲಿ ಬಿಕ್ಕದ್ದನಿಲ್ಲಾ ಹಾಕು"

CC-O. Jnanabharathi Book Centre, Sringeri

CC-O. In Public Domain. Digitized by eGangotri

ಎಂಬುದು ನಾಣ್ಣುಡಿ. ಈ ಭಾಗದಲ್ಲಿ ಸಾಲು ಬತ್ತ ಹಾಕುತ್ತಾರೆ. ಉತ್ತು, ಗೊಬ್ಬರ ಚೆಲ್ಲಿ ಹದ ಮಾಡಿದ ಹೊಲಗದ್ದೆಗಳಿಗೆ ನೇಗಿಲಿನಿಂದ ಉದ್ದುದ್ದವಾಗಿ ಸಾಲು ಹೊಡೆಯುತ್ತಾರೆ. ಮತ್ತೊಬ್ಬರು ನೇಗಿಲ ಹಿಂಬದಿಗೆ ಸೆಡ್ಡೆ ಕಟ್ಟಿಕೊಂಡು ಬತ್ತ ಬಿಡುತ್ತಾ ಹೋಗುತ್ತಾರೆ. ರಾಗಿಯಂತೆ ಕುಕ್ಕೆ ಹಿಡಿಯಲು ಆಗುವುದಿಲ್ಲ. ಏಕೆಂದರೆ ಒಂದು ಕೈಯಲ್ಲಿ ಸೆಡ್ಡೆ ಹಿಡಿಯಬೇಕು; ಮತ್ತೊಂದು ಕೈಯಲ್ಲಿ ಬತ್ತ ಬಿಡಬೇಕು. ಆದುದರಿಂದ ಸೊಂಟಕ್ಕೆ ಒಂದು ಬಟ್ಟೆಯನ್ನು ಜೋಳಿಗೆಯಂತೆ ಕಟ್ಟಿ ಅದರಲ್ಲಿ ಬತ್ತ ತುಂಬಿಕೊಂಡಿರುತ್ತಾರೆ. ಬತ್ತ ಹಾಕಿಯಾದ ಮೇಲೆ ಹಲುಬೆ ಹೊಡೆಯುತ್ತಾರೆ. ಹಾಕಿದ ಐದಾರು ದಿವಸಕ್ಕೆ ಬತ್ತ ಹುಟ್ಟಿ ಸಾಲು ಕಾಣುತ್ತದೆ. ಮಳೆ ಬಿದ್ದು ಗದ್ದೆಯ ಮೇಲ್ಮೈ ಗಟ್ಟಿಯಾದರೆ ಹಲುಬೆ ಹೊಡೆಯುತ್ತಾರೆ. ಬತ್ತದ ಪೈರು ಮೂರು ನಾಲ್ಕು ಅಂಗುಲ ಬೆಳೆದ ಮೇಲೆ ತಗರದಾಳು ಕುಂಟೆ ಹೊಡೆಯುತ್ತಾರೆ. ಎರಡು ಹಲ್ಲಿನ ಕುಂಟೆಯನ್ನೂ ಹೊಡೆಯಬಹುದು. ಬತ್ತದ ಸಾಲುಗಳ ಮಧ್ಯೆ ಇರುವ ಕಳೆ ಕುಂಟೆ ಹೊಡೆದಾಗ ಕಿತ್ತುಹೋಗುತ್ತದೆ. ಸಾಲು ಏಕಮುಖವಾದುದರಿಂದ ಆಡ್ಡವಾಗಿ ಕುಂಟೆ ಹೊಡೆಯುವಂತಿಲ್ಲ. ಆದುದರಿಂದ ಉಳಿಯುವ ಕಳೆಯನ್ನು ಸಾಲುವಾರು ಕೀಳಿಸಬೇಕು. ಕಡೆಯ ಪಕ್ಷ ಎರಡು ಬಾರಿಯಾದರೂ ಕಳೆ ಕೀಳುತ್ತಾರೆ. ಸಾಲು ಬತ್ತ ಐದು ತಿಂಗಳಿಗೆ ಕೊಯ್ಲಿಗೆ ಬರುತ್ತದೆ.

ಬತ್ತದ ಬೇಸಾಯದಲ್ಲಿ ನಾಟಿಮಾಡುವುದೇ ಅತ್ಯಂತ ಜನಪ್ರಿಯವಾದ ಪದ್ಧತಿ. ನಾಟಿ ಮಾಡಬೇಕಾದರೆ ಖಾಯಂ ನೀರಿನ ಆಸರೆಯಿರಬೇಕು. ನೀರಾವರಿ ಆಣೆಕಟ್ಟುಗಳು, ಕೆರೆಗಳು, ಕಟ್ಟೆಗಳು ಮತ್ತು ಜೌವೇಳುವಂತಹ ಹಳ್ಳಿಸಾಲುಗಳಲ್ಲಿ ಬತ್ತದ ನಾಟಿ ಮಾಡುತ್ತಾರೆ. ನಾಟಿಮಾಡುವ ಸಾಲು ಆಗಸ್ಟ್–ಸೆಪ್ಟೆಂ

CC-O. Jyotishi Bharati Book Collective, Srirgeri

CC-O. In Public Domain. Digitized by eGangotri

ಬರ್. ಬೇಸಿಗೆ ಬೆಳೆಯಾದರೆ ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ನಾಟಿಮಾಡುತ್ತಾರೆ. ನಾಟಿಯಲ್ಲಿ ಕಲಸುನಾಟಿ, ಸಾಲುನಾಟಿ ಎಂದು ಎರಡು ವಿಧ. ಕಲಸುನಾಟಿ ಎಂದರೆ ಒಂದು ಅಂತರದಲ್ಲಿ ಬತ್ತದ ಸಸಿಗಳನ್ನು ನೆಡುತ್ತಾ ಹೋಗುವುದು. ಸಾಲುನಾಟಿ ಎಂದರೆ ಸಸಿಗಳನ್ನು ಸಾಲಾಗಿ ನೆಡುವುದು. ಇದನ್ನು ಜಪಾನು ಮಾದರಿಯ ನಾಟಿ ಎಂದೂ ಹೇಳುತ್ತಾರೆ. ಕರ್ನಾಟಕದಲ್ಲಿ ಕಲಸುನಾಟಿಯ ಪದ್ಧತಿಯೇ ಹೆಚ್ಚು ಎಂದು ಹೇಳಬಹುದು.

ಹೈನುಬತ್ತದ ಬೆಳೆಗೆ ಸಾಮಾನ್ಯವಾಗಿ ಆರಿದ್ರಾ ಮಳೆಯ ಕೊನೆಯ ಪಾದದಲ್ಲಿ ಒಟ್ಟಲು ಹಾಕುತ್ತಾರೆ. ಒಂದು ಎಕರೆಗೆ ಹದಿನೈದರಿಂದ ಇಪ್ಪತ್ತು ಸೇರಿನವರೆಗೆ ಬೀಜ ಬೇಕಾಗುತ್ತದೆ. ಆಧುನಿಕ ತಳಿಗಳಾದರೆ, ರಸಾಯನಿಕ ಗೊಬ್ಬರ ಕ್ರಮವಾಗಿ ಕೊಡುವುದಾದರೆ ಬೀಜ ಇನ್ನೂ ಕಡಿಮೆಯಾಗುತ್ತದೆ. ಒಂದು ಗದ್ದೆಯನ್ನು ಉತ್ತು ಗೊಬ್ಬರ ಹಾಕಿ ಹದಮಾಡಿರುತ್ತಾರೆ. ಇದನ್ನು ಒಟ್ಟಲು ಗದ್ದೆ ಎಂದೆ ಕರೆಯುತ್ತಾರೆ. ಅದರಲ್ಲಿ ಉದ್ದುದ್ದವಾಗಿ ಪಾತಿಗಳನ್ನು ಮಾಡಿ ಬತ್ತ ಚಲ್ಲುತ್ತಾರೆ. ಈ ಪ್ರತಿ ಪಾತಿಯ ಮಧ್ಯದ ಮಣ್ಣನ್ನು ತೆಗೆದು ಚಲ್ಲಿದ ಕಾಳು ಮುಚ್ಚುವಂತೆ ಹರಡುತ್ತಾರೆ. ಒಟ್ಟಲಿನಲ್ಲಿ ಬರ ಒಟ್ಟಲು, ನೀರು ಒಟ್ಟಲು ಎಂದು ಎರಡು ವಿಧ. ನೀರು ಕಟ್ಟದೆ ಬರಿಯ ತೇವಾಂಶದಿಂದ ಬೆಳೆಯುವುದು ಬರ ಒಟ್ಟಲು. ಬೀಜ ಹಾಕಿದ ಮೇಲೆ ನೀರು ಕಟ್ಟಿದರೆ ಅದು ನೀರೊಟ್ಟಲು. ನೀರೊಟ್ಟಲು ಹಾಕುವವರು ಮೊಳೆಬತ್ತ ಚೆಲ್ಲುತ್ತಾರೆ. ಬತ್ತವನ್ನು ನೀರಲ್ಲಿ ನೆನೆಯಿಸಿ ಮಂಕರಿಗಳಿಗೆ ತುಂಬಬೇಕು. ಅವುಗಳ ಮೇಲೆ ಜಾಗ ಬಿಡದಂತೆ ಗೋಣಿಚೀಲ ಅಥವಾ ಮತ್ತೇನಾದರೂ ಮುಚ್ಚಿ ಭಾರ ಹೇರಬೇಕು. ನೆನೆದ ಬತ್ತ ಎರಡು ಮೂರು ದಿನದಲ್ಲಿ ಮೊಳೆಯೊಡೆಯುತ್ತವೆ. ಆಗ ತೆಗೆದುಕೊಂಡುಹೋಗಿ ಸಿದ್ಧ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಡಿಸಿದ ಒಟ್ಟಲು ಗದ್ದೆಯಲ್ಲಿ ಚಲ್ಲಿ ನೀರುಕಟ್ಟುವುದು. ಹೀಗೆ ಹಾಕಿದ ಒಟ್ಟಲಿನ ಸಸಿಗಳನ್ನು ಇಪ್ಪತ್ತುದಿನದಿಂದ ಒಂದು ತಿಂಗಳೊಳಗೆ ಕಿತ್ತು ನಾಟಮಾಡುತ್ತಾರೆ.

ಬತ್ತದ ಒಟ್ಟಲು ಹಾಕಿದ ಹದಿನೈದು ದಿನಗಳ ನಂತರ ಗದ್ದೆಯನ್ನು ಕರಗಹಾಕಬೇಕು. ಕರಗಹಾಕುವುದು ಎಂದರೆ ನೀರುಕಟ್ಟಿ ಉಳುವುದು ಎಂದರ್ಥ. ಮುಂಗಾರಿನಲ್ಲಿ ಗದ್ದೆಯನ್ನು ಉತ್ತು ಹುರುಳಿ, ಸಣಬಿನ ಬೀಜ, ಜೋಳ, ಹುಚ್ಚೆಳ್ಳು ಇತ್ಯಾದಿ ಧಾನ್ಯಗಳನ್ನು ಬೆರಸಿ ಚಲ್ಲಿರುತ್ತಾರೆ. ಅವುಗಳು ಬೆಳೆದ ಮೇಲೆ ಗದ್ದೆಗೆ ಗೊಬ್ಬರವಾಗಲಿ ಎಂದು ಮಣ್ಣಿನಲ್ಲಿ ತುಳಿಯುತ್ತಾರೆ. ಇದರೊಂದಿಗೆ ಕಳೆಯೂ ಬೆಳೆದಿರುತ್ತದೆ. ಈ ಎಲ್ಲವನ್ನೂ ಉತ್ತು ನೀರು ತುಂಬಿಸಿದರೆ ಆ ಗಿಡಗಳೆಲ್ಲಾ ಕೊಳೆತು ಗೊಬ್ಬರವಾಗುತ್ತದೆ. ಆದುದರಿಂದ ಕೊಳೆಹಾಕುವುದು ಎಂಬ ಪ್ರಯೋಗವೂ ಇದೆ. ಮೊದಲು ಗದ್ದೆಯ ಬದುವಿನ ಅಂಚನ್ನು ಗುದ್ದಲಿಯಿಂದ ಕೊಚ್ಚಬೇಕು. ಆನಂತರ ನೀರುಕಟ್ಟಿ ಮೊದಲನೆ ಉಳ ಉಳುತ್ತಾರೆ. ಹೀಗೆ ಕರಗಿದ ಗಿಡಗಳು ಕದರಿ ಕೊಳ್ಳುತ್ತವೆ. ಇದರಮೇಲೆ ಎಕರೆಗೆ ಏಳೆಂಟು ಗಾಡಿ ಗೊಬ್ಬರ ಚಲ್ಲುತ್ತಾರೆ. ಗದ್ದೆಯಲ್ಲಿ ಹಸಿರುಗೊಬ್ಬರದ ಕಾಳು ಬಿತ್ತದವರು ಹೊಂಗೆಯ ಸೊಪ್ಪು ಕಡಿದು ಗದ್ದೆಗೆ ತುಳಿಯುತ್ತಾರೆ. ನಾಟಗಾಗಿ ನಿಗದಿಯಾದ ಹಿಂದಿನ ದಿನದ ಒಟ್ಟಲ ಸಸಿ ಕಿತ್ತಿಡುತ್ತಾರೆ. ಮಾರನೆ ಬೆಳಿಗ್ಗೆ ಮುಂದಿನಿಂದ ಆರುಗಳು ಉಳುತ್ತವೆ. ಅವುಗಳ ಹಿಂದಿನಿಂದ ಜನರು ತೆವಡೆ ತುಳಿಯುತ್ತಾರೆ. ಇಡೀ ಗದ್ದೆ ಒಂದೇ ಮಟ್ಟವಾಗುತ್ತದೆ. ಉಬ್ಬುತಗ್ಗಿದ್ದರೆ ನೀರು ಹಲುಬಿ ಹೊಡೆದು ಸಮ ಮಾಡುತ್ತಾರೆ. ಆಮೇಲೆ ಕಿತ್ತಿಟ್ಟ ಸಸಿಯನ್ನು ಗದ್ದೆಯಲ್ಲಿ ಅಲ್ಲಲ್ಲಿ ಗುಪ್ಪೆಗುಪ್ಪೆಯಾಗಿ ಬಿಡುತ್ತಾರೆ. ಸಸಿ ನೆಡುವವರು ಹಿಂದು ಮುಂಕಡೆಗಾಗಿ ಬತ್ತದ ಸಸಿಗಳಂತೆ

Sri Vidyabharathi Book Gallery, Sirsi

CC-O. In Public Domain. Digitized by eGangotri

ಅಂದಾಜಿನ ಅಂತರದಲ್ಲಿ ನೆಡುತ್ತಾರೆ. ನಾಟಿ ಮಾಡಿದ ಎರಡು ಮೂರು ದಿನ ಗದ್ದೆಯಲ್ಲಿ ಹೆಚ್ಚು ನೀರಿರಬಾರದು. ಸಸಿ ಬೇರು ಬಿಟ್ಟಮೇಲೆ ಗದ್ದೆಯಲ್ಲಿ ಯಾವಾಗಲೂ ತುಂಬು ನೀರಿರಬೇಕು. ಇಲ್ಲವಾದರೆ ಕಳೆ ಬೆಳೆಯಲು ಅವಕಾಶವಾಗುತ್ತದೆ.

ಬತ್ತದ ನಾಟಿಯಾದ ಎಂಟು ಹತ್ತು ದಿನಕ್ಕೆ ಮೊದಲ ಕಳೆ ತೆಗೆಯಬೇಕು. ಸಸಿಗಳ ಅಕ್ಕಪಕ್ಕದಲ್ಲಿ ಬೆಳೆಯುವ ಕಳೆಯನ್ನು ಕೈಗಳಿಂದ ಕಿತ್ತುಹಾಕುತ್ತಾರೆ. ಇದು ಭೂಮಿ ಗಟ್ಟಿಯಾಗದಂತೆಯೂ ಮಾಡುತ್ತದೆ. ಹೀಗೆ ಹತ್ತು ಹದಿನೈದು ದಿನಗಳಿಗೊಮ್ಮೆಯಂತೆ ಮೂರು ನಾಲ್ಕು ಸಾರಿ ಕಳೆ ಕೀಳುತ್ತಾರೆ. ನಾಟಿ ಬತ್ತಕ್ಕೆ ಈ ಸಮಯದಲ್ಲಿ ಮೇಲುಗೊಬ್ಬರ ಕೊಡುವ ಪದ್ಧತಿಯುಂಟು. ಒಳ್ಳೆಯ ಹಣ್ಣುಗೊಬ್ಬರ ಅಥವಾ ಕುರಿಯ ಗೊಬ್ಬರವನ್ನು ಕಳೆಕೀಳುವಾಗ ಭೂಮಿಯಲ್ಲಿ ಹಾಕಿ ಕಲಸುತ್ತಾರೆ. ಆಗ ಗದ್ದೆಯಲ್ಲಿ ನೀರು ಕಡಿಮೆ ಇರಬೇಕು. ಈಗಲಂತೂ ರಸಾಯನಿಕ ಗೊಬ್ಬರವನ್ನು ಎರಡು ಮೂರು ಬಾರಿ ಕೊಡುವವರೂ ಇದ್ದಾರೆ. ಬತ್ತದ ಸಸಿಗಳು ಬೆಳೆದು ದೊಡ್ಡವಾದ ಮೇಲೆ ಗದ್ದೆಗಿಳಿಯುವುದಿಲ್ಲ. ಆ ಮೇಲೆ ಏನಿದ್ದರೂ ಕ್ರಮವಾಗಿ ನೀರು ನೋಡಿಕೊಳ್ಳುವುದಷ್ಟೇ ಕೆಲಸ. ಅಕ್ಟೋಬರ್ ಕೊನೆಯವಾರದಲ್ಲಿ ಬತ್ತ ಹೊಡೆ ಹೊರಡುತ್ತದೆ. ಅನಂತರ ತೆನೆ ಹಾಲಾಗಿ, ಕಾಯಾಗಿ ಮಾಗುತ್ತದೆ. ಬತ್ತಕ್ಕೆ ಅನೇಕ ರೋಗಗಳು ಬರುತ್ತವೆ. ಹುಳಹುಪ್ಪಟೆಗಳ ಕಾಟವಿದೆ. ಇಲಿ, ತೋಡಗಳ ಹಾವಳಿ ಇರುತ್ತದೆ. ಈಗ ಇವುಗಳಿಗೆಲ್ಲಾ ಔಷಧಿ ಸಿಂಪಡಣೆಯ ಏರ್ಪಾಡಿದೆ.

ಬತ್ತ ಚೆನ್ನಾಗಿ ಮಾಗಿ ಹಣ್ಣಾದಾಗ ಅದನ್ನು ಕೊಯ್ದು ಆರಿ ಹಾಕುತ್ತಾರೆ. ಮಳೆಬರುವ ಭಯವಿಲ್ಲದಿದ್ದರೆ ಒಂದೆರಡು ದಿವಸ ಅದನ್ನು ಗದ್ದೆಗಳಲ್ಲಿಯೇ ಬಣಗಿಲು ಬಿಡುತ್ತಾರೆ. ಅನಂ

Sri Vidyabharathi Book Centre, Sringeri

CC-O. In Public Domain. Digitized by eGangotri

ತರ ಹೊರೆಕಟ್ಟಿ ಕಣಕ್ಕೆ ಸಾಗಿಸುವರು. ಹಿಂದಿನ ಕಾಲದಲ್ಲಿ ರಾಗಿಯಂತೆ ಬತ್ತವನ್ನೂ ಮೆದೆಹಾಕುತ್ತಿದ್ದರು. ಈಗ ಕಣಕ್ಕೆ ತಂದಕೂಡಲೇ ಬಡಿದುಬಿಡುತ್ತಾರೆ. ನಾಲ್ಕು ಕಾಲಿನ ಒಂದು ಮಣೆ ಅಥವಾ ಹಲಗೆ ಏನಾದರೊಂದನ್ನು ಕಣದ ಮಧ್ಯೆ ಇಡುತ್ತಾರೆ. ಬತ್ತದ ಹುಲ್ಲನ್ನು ಸಣ್ಣಸಣ್ಣ ಕಂತೆಗಳಾಗಿ ಹಿಡಿದುಕೊಂಡು ಅದರ ಮೇಲೆ ಬಡಿಯುತ್ತಾರೆ. ತೆನೆಗಳಲ್ಲಿರುವ ಬತ್ತ ಉದುರುತ್ತದೆ. ಹುಲ್ಲನ್ನು ಮತ್ತೊಂದು ಕಡೆಗೆ ರಾಶಿ ಹಾಕುತ್ತಾರೆ. ಇದನ್ನು ತೆನೆಬತ್ತ ಎಂದು ಕರೆಯುತ್ತಾರೆ. ಇದಾದ ಮೇಲೆ ಇದೇ ಹುಲ್ಲನ್ನು ಕಣದ ತುಂಬ ಹರಡಿ ದನಗಳ ಎಣಿಯಿಂದ ತುಳಿಸುತ್ತಾರೆ. ಇದಕ್ಕೆ ಹುಲ್ಲೊಕ್ಕಲು ಎಂದು ಹೆಸರು. ಅನಂತರ ಹುಲ್ಲನ್ನು ದನಗಳಿಗಾಗಿ ಹುಲ್ಲು ಕೊಪ್ಪಲಿಗೆ ಸಾಗಿಸಿ ಒಟ್ಟುತ್ತಾರೆ. ಅದು ಮುಂದಿನ ವರ್ಷದವರೆಗೆ ರೈತನ ದನಗಳಿಗೆ ಆಹಾರವಾಗುತ್ತದೆ. ಬತ್ತವನ್ನು ಪೆಟ್ಟಿ, ಕಣಜಗಳಲ್ಲಿ ತುಂಬಿಡುತ್ತಾರೆ.

ಗೋದಿ

ಗೋದಿ ಕರ್ನಾಟಕದ ಬೆಳೆಯಾಗಿರುವಂತೆ ಕಾಣುವುದಿಲ್ಲ. ಏಕೆಂದರೆ ಅದು ಇಲ್ಲಿ ಈಗ ಸುಮಾರು ಮೂರುಲಕ್ಷ ಹೆಕ್ಟೇರುಗಳಲ್ಲಿ ಬೆಳೆಯುತ್ತಿದೆ ಎಂದು ತಿಳಿದುಬರುತ್ತದೆ. ಗೋದಿ ಪ್ರಧಾನವಾಗಿ ನೀರಾವರಿ ಬೆಳೆ. ಒಣ ಬೆಳೆಯಾಗಿಯೂ ಉತ್ತರ ಕರ್ನಾಟಕದ ಭಾಗಗಳಲ್ಲಿ ಬೆಳೆಯುತ್ತಾರೆ. ಗೋದಿಯನ್ನು ಅಕ್ಟೋಬರ್ ನವೆಂಬರ್ ತಿಂಗಳುಗಳಲ್ಲಿ ಬಿತ್ತನೆಮಾಡುತ್ತಾರೆ. ನಾಲ್ಕು ನಾಲ್ಕುವರೆ ತಿಂಗಳಿಗೆ ಕೊಯ್ಲಿಗೆ ಬರುತ್ತದೆ. ಬತ್ತದಂತೆಯೇ ಗೋದಿಯನ್ನು ಚೆಲ್ಲಿ ಮತ್ತು ಸಾಲಿನಲ್ಲಿ ಹಾಕಿ ಬೆಳೆಯುತ್ತಾರೆ. ಮೊದಲು ಮೂರು ಸಾಲ್ಕು ಉಕ್ಕೆ ಭೂಮಿ

Sri Vidyabharathi Book Centre, Sringeri

CC-O. In Public Domain. Digitized by eGangotri



ಗೋದಿ

ಯನ್ನು ಉತ್ತು ಹದಮಾಡಿಕೊಳ್ಳುತ್ತಾರೆ. ಗೋದಿಗೆ ಅಧಿಕ ವಾದ ಗೊಬ್ಬರ ಬೇಕಾಗುತ್ತದೆ. ಇಳುವರಿಯೂ ಹೆಚ್ಚಿರುತ್ತದೆ. ಕಾಳನ್ನು ಬಿತ್ತಿದ ಮೇಲೆ ನಾಲ್ಕೈದು ದಿನಗಳ ನಂತರ ಮೊಳಕೆ ಒಡೆಯುತ್ತದೆ. ಮೇಲೆ ಬಂದ ನಂತರ ಕ್ರಮವಾಗಿ ಕಳೆ ತೆಗೆಯಬೇಕು. ಮೇಲು ಗೊಬ್ಬರ ಕೊಡುವುದೂ ಉಂಟು. ಗೊದಿಯನ್ನು ಒಣಬೆಳೆಯಾಗಿ ಬೆಳೆಯುವ ಕಡೆ ಕುಸುಬೆ, ಅಗಸೆ ಮುಂತಾದುವನ್ನು ಉಪಬೆಳೆಯಾಗಿ ಬೆಳೆಯುವುದುಂಟು. ಫೆಬ್ರುವರಿ ತಿಂಗಳಲ್ಲಿ ಗೋದಿಯನ್ನು ಕಟಾವು ಮಾಡುತ್ತಾರೆ.

CC-O. In Public Domain. Digitized by eGangotri

CC-O. In Public Domain. Digitized by eGangotri

ಅನಂತರ ಅದನ್ನು ಕಣದಲ್ಲಿ ಹಾಕಿ ತುಳಿಸಿ, ಇಲ್ಲವೆ ಬಡಿದು ಕಾಳುಗಳನ್ನು ಬೇರೆ ಮಾಡುತ್ತಾರೆ. ಗೋದಿಯ ವ್ಯವಸಾಯಕ್ಕೆ ಕಪ್ಪುಮಣ್ಣು ಬೇಕಾದುದರಿಂದ ಉತ್ತರ ಕರ್ನಾಟಕ ಭಾಗದಲ್ಲಿ ಮಾತ್ರ ಬೆಳೆಯುತ್ತಾರೆ.

ಸಜ್ಜಿ, ನವಣೆ

ಸಜ್ಜಿ ಉತ್ತರ ಕರ್ನಾಟಕ ಭಾಗದ ಇನ್ನೊಂದು ಬೆಳೆ. ಜೋಳಕ್ಕೆ ಪೂರಕವಾಗಿ ಇದು ಬೆಳೆಯುತ್ತದೆ. ಜೋಳದಂತೆಯೇ ಇದೂ ಕೂಡ ಒಣ ಬೆಳೆ. ಸಜ್ಜಿರೊಟ್ಟಿ ಉತ್ತರ ಮೈದಾನ ಭಾಗದಲ್ಲಿ ತುಂಬಾ ಪ್ರಸಿದ್ಧಿ. ಈ ಬೆಳೆಯು ವ್ಯವಸಾಯವೂ ಜೋಳದ ವ್ಯವಸಾಯ ಪದ್ಧತಿಯಂತೆಯೇ ಇರುತ್ತದೆ. ಈಗ ಸ್ಥಳೀಯ ತಳಿಗಳನ್ನು ಬಿಟ್ಟು ಅಧಿಕ ಇಳುವರಿ ಕೊಡುವ ಎಚ್. ಬಿ 1, ಎಚ್. ಬಿ 4 ನ್ನು ಹೆಚ್ಚು ಬೆಳೆಯುತ್ತಾರೆ. ಇವು ನೀರಿನ ಆಸರೆ ಇದ್ದರೆ ಹೆಚ್ಚು ಇಳುವರಿ ಕೊಡುತ್ತವೆ. ಎಚ್. ಬಿ. 3 ಒಣ ಬೇಸಾಯಕ್ಕೆ ಉತ್ತಮವಾದ ತಳಿಯಾಗಿದೆ. ಸಾಮೆ ಪ್ರಧಾನವಾಗಿ ಮುಂಗಾರು ಬೆಳೆಯಾಗಿ ಬೆಳೆಯುತ್ತದೆ. ಜೂನ್, ಜುಲೈ ತಿಂಗಳಿನಲ್ಲಿ ಬಿತ್ತುತ್ತಾರೆ. ನವೆಂಬರ್ ತಿಂಗಳಿನಲ್ಲಿ ಕೊಯ್ಲಿಗೆ ಬರುತ್ತದೆ. ನವಣೆ ಒಂದು ಉಪ ಬೆಳೆ. ಸಾಲು ಗಳಲ್ಲಿ ಹಾಕಿ ಇದನ್ನು ಬೆಳೆಯುತ್ತಾರೆ. ಇದು ಪ್ರಧಾನವಾದ ಆಹಾರ ಬೆಳೆಯಲ್ಲವಾದುದರಿಂದ ಪ್ರತ್ಯೇಕ ವ್ಯವಸಾಯ ಪದ್ಧತಿಯೇನೂ ಇದಕ್ಕೆ ಕಂಡುಬರುವುದಿಲ್ಲ.

ಹಾರಕ

ಇದು ಹುಲ್ಲಿನ ಜಾತಿಯ ಒಂದು ಪೈರು. ಒಂದು ಕಾಲ ದಲ್ಲಿ ದಕ್ಷಿಣ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಮಂಡ್ಯ ಜಿಲ್ಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ಬೆಳೆಯುತ್ತಿತ್ತು. ಅತ್ಯಂತ ಕಡಿಮೆ ಮಳೆಯಲ್ಲಿ ಬೆಳೆಯುವ ಬೆಳೆಯಿದು. ಇಂಗ್ಲೆಂಡಿನ ಓಟ್ಸಿಗೆ ಸರಿಸಮನಾದುದೆಂದು ಹೇಳುತ್ತಾರೆ. ಮುಂಗಾರಿನಲ್ಲಿ ಅಂದರೆ ಭರಣಿ ಮಳೆಯಲ್ಲಿ ಹಾರಕ ಬಿತ್ತುವರು. ಅದು ಕೊಯ್ಲಿಗೆ ಬರಲು ಆರು ತಿಂಗಳು ಹಿಡಿಯುತ್ತದೆ. ಹಾರಕದ ಬೆಳೆಗೆ ಕೆಂಪು ಮಣ್ಣಿನ ಭೂಮಿ ಉತ್ಕೃಷ್ಟವಾದುದು. ಎರಡು ಮೂರು ಉಕ್ಕೆ ಚೆನ್ನಾಗಿ ಭೂಮಿಯನ್ನು ಉಳಬೇಕ್ಕು. ಹದವಿದ್ದಾಗ ಹಾರಕ ಬಿತ್ತಬೇಕು. ಅದು ಹುಟ್ಟಿ ಮೇಲೆ ಬರುತ್ತದೆ. ಎಳೆಯದರಲ್ಲಿ ಹಾರಕ ವಾಸ್ತವವಾಗಿ ಹುಲ್ಲಿನ ಹಾಗೆಯೇ ಇರುತ್ತದೆ. ಬಿತ್ತಿದ ಮೇಲೆ ಇದಕ್ಕೆ ಹೆಚ್ಚೇನೂ ವ್ಯವಸಾಯವಿರುವುದಿಲ್ಲ. ಬಿಡುವಿದ್ದರೆ ರೈತರು ಯಾವಾಗಲೊ ಒಮ್ಮೆ ಕಳೆ ತೆಗೆಯಬಹುದು. ಜುಲೈ, ಆಗಸ್ಟ್ ತಿಂಗಳಿನಲ್ಲಿ ಹಾರಕದ ಹೊಲಗಳಿಗೆ ಕುರಿಬಿಟ್ಟು ಮೇಯಿಸಿ ಬಿಡುತ್ತಾರೆ. ಅವು ಗದ್ದೆಯವರೆಗೆ ಮೆಯ್ದು ಬಿಡುವುದೂ ಉಂಟು. ಹಿಂಗಾರು ಮಳೆ ಬೀಳುತ್ತಿದ್ದ ಹಾಗೆಯೇ ಅದು ಮತ್ತೆ ಚಿಗಿತು ಒಡೆದು ಬೆಳೆಯುತ್ತದೆ. ಹಾರಕದ ಅಕ್ಕಿ ಅನ್ನ, ಕೆನೆಮೊಸರು ದಕ್ಷಿಣ ಕರ್ನಾಟಕದಲ್ಲಿ ಹೆಸರುವಾಸಿಯಾದುದು. ಹಾರಕ ಅನೇಕ ವರ್ಷಗಳ ಕಾಲ ಕೆಡದೆ, ಹುಳಿಯದೆ ಇರಬಲ್ಲದು. ಇದರ ಹುಲ್ಲನ್ನು ಮೂಟೆ ಕಟ್ಟಲು ಉಪಯೋಗಿಸುತ್ತಾರೆ. ದನಗಳಿಂದ ತುಳಿಸಿ ಕಾಳು ಬೇರೆ ಮಾಡುತ್ತಾರೆ. ಈಗ ಹಾರಕ ಬೆಳೆಯುವುದು ಬಹಳ ಕಡಿಮೆಯಾಗಿದೆ. ಕೆಂಪು ಮಣ್ಣಿನೊಂದಿಗೆ ಕಲಿಸಿ ಇಟ್ಟರೆ ವರ್ಷಾನುಗಟ್ಟಲೆ ಇರುತ್ತದೆ. ಕ್ಷಾಮ ಕಾಲದಲ್ಲಿ ಹಾಗೆ ಮಾಡುತ್ತಿದ್ದರಂತೆ. ಈ ಬಗ್ಗೆ ಜನಪದ ಕಥೆಗಳುಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳಿನ ಬೆಳೆಗಳು

ಕಾಳು ಮನುಷ್ಯನಿಗೆ ಮತ್ತು ಪ್ರಾಣಿಗಳಿಗೆ ಅಗತ್ಯವಾದ ಸಸಾರಜನಕ ಒದಗಿಸುತ್ತದೆ. ಶಾಖಾಹಾರಿಗಳಿಗಂತೂ ಇವಿಲ್ಲದಿದ್ದರೆ ಸಸಾರಜನಕ ಇಲ್ಲವೆಂದೇ ಹೇಳಬೇಕು. ಸಾರುಮಾಡಲಂತೂ ಕಾಳುಗಳು ಬೇಕೆಬೇಕು. ಇವುಗಳನ್ನು ಉಪಯೋಗಿಸದವರೇ ಇಲ್ಲ. ಬಡವ ಬಲ್ಲಿದ ಎನ್ನದೆ ಕಾಳಿನ ಉಪಯೋಗ ನಡೆಯುತ್ತದೆ. ನಮ್ಮ ದಿನನಿತ್ಯದ ಅಡುಗೆಯಲ್ಲಿ ಕಾಳುಗಳಿಲ್ಲದಿದ್ದರೆ ಏನೂ ನಡೆಯುವುದಿಲ್ಲ. ಆದುದರಿಂದಲೇ ಇತ್ತೀಚಿನ ದಿನಗಳಲ್ಲಿ ಇವುಗಳ ಬೆಲೆ ಗಗನಕ್ಕೇರಿದೆ.

ಅವರೆ

ಅವರೆ ಹಬ್ಬುಬಳ್ಳಿಯ ಜಾತಿಗೆ ಸೇರಿದ ಗಿಡ. ಇದನ್ನು ಹೊಲಗಳಲ್ಲಿ ಉಪಬೆಳೆಯಾಗಿ ಬೆಳೆಯುತ್ತಾರೆ. ಅವರೆಯಲ್ಲಿ ಕೆಂಪು ಅವರೆ, ಬಿಳಿ ಅವರೆ, ಕಡಲೆ ಅವರೆ ಎಂದು ಅನೇಕ ವಿಧಗಳುಂಟು. ರಾಗಿಯ ಹೊಲಗಳಿಗೆ ಅವರೆ ಸಾಲು ಹಾಕುತ್ತಾರೆ. ಅವರೆ ಹಿಂಗಾರಿ ಬೆಳೆ. ಬಿತ್ತನೆ, ನಾಟಿ, ಕೂರಿಗೆ, ಗುಣಿ ಈ ಯಾವುದೇ ರಾಗಿ ಬೆಳೆಯ ಸಾಲುಗಳಲ್ಲಿ ಅವರೆ ಇರುತ್ತದೆ. ಇದನ್ನು ಆರಿದ್ರಾ ಮಳೆಯಿಂದ ಹಾಕಲು ಆರಂಭಿಸುತ್ತಾರೆ. ಅವರೆ ನವೆಂಬರ್ ತಿಂಗಳಿನಲ್ಲಿ ಕುಡಿಯೊಡೆದು ಹಬ್ಬುತ್ತದೆ. ಈ ಹೊತ್ತಿಗೆ ರಾಗಿಯ ಕೊಯ್ಲಾಗಿರುತ್ತದೆ. ಚಳಿಗಾಲದಲ್ಲಿ ಇದು ಹೂ ಬಿಡುತ್ತದೆ. ಡಿಸೆಂಬರ್ ಕೊನೆಯ ವಾರದಿಂದ ಫೆಬ್ರವರಿ ಎರಡನೆ ವಾರದವರೆವಿಗೂ ಹಸಿ ಅವರೇಕಾಯಿಯ ಸುಗ್ಗಿ. ಫೆಬ್ರವರಿ ಕೊನೆವಾರದಲ್ಲಿ ಕಾಯಿ ಹಣ್ಣಾಗಿ ಒಣಗುತ್ತದೆ. ಇದನ್ನು ಆವರೆ ತರಳಿ ಬಿಡಿಸಿ ಕಳೆಯುತ್ತಾರೆ. ಅನಂತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರೆ

ಅದನ್ನು ತರೆದು ಕಣದಲ್ಲಿ ಹಾಕಿ ಬಡಿಯುತ್ತಾರೆ. ಅವರೆ ಕಡ್ಡಿ ದನಗಳಿಗೆ ಉತ್ತಮವಾದ ಆಹಾರ. ಕಾಳು ಬೇರ್ಪಡಿಸಿದ ಮೇಲೆ ಉಳಿಯುವ ಅವರೆ ಹೊಟ್ಟು ಆಡು ಕುರಿಗಳಿಗೆ ಮತ್ತು ಕರೆಯುವ ಎಮ್ಮೆ ಹಸುಗಳಿಗೆ ಉತ್ತಮ ಆಹಾರ. ಅವರೆಕಾಳು, ಬೇಳೆ, ಚಿಲಕವರೆ ನಾನಾ ವಿಧದ ಅಡುಗೆಗೆ ಉಪಯೋಗಿಸುತ್ತಾರೆ.

ತೊಗರಿ

ತೊಗರಿ ಮೂರು ಅಡಿ ಎತ್ತರದವರೆಗೆ ಬೆಳೆಯುವ ಪೊದೆಯಂತಹ ಗಿಡ. ಇದರ ಕಾಳುಗಳಿಂದ ಆದ ಬೇಳೆ ಇಂದು ಇಡೀ ಭಾರತದಲ್ಲಿ ನಿತ್ಯೋಪಯೋಗಿ ವಸ್ತುವಾಗಿದೆ. ತೊಗರಿಯನ್ನು ಉಷ್ಣಬೆಳೆ ಮತ್ತು ಮುಖ್ಯ ಬೆಳೆಯಾಗಿಯೂ ಬೆಳೆಯುತ್ತಾರೆ. ಹೊಲಗಳಿಗೆ ಸಾಲು ಹಾಕಿ ಬೆಳೆಯುವುದು ಉಪಬೆಳೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಹೊಲದ ಕೆಲವು ಭಾಗಗಳಿಗೆ ಬಿತ್ತಿ ಇದನ್ನೇ ಪ್ರಧಾನವಾದ ಬೆಳೆಯಾಗಿ ಬೆಳೆಯುವುದುಂಟು. ಅವರೆಯಂತೆ ಇದೂ ಸಹ ಚಳಿಗಾಲದಲ್ಲಿ ಹೂವೊಡೆದು ಕಾಯಿ ಬಿಡುತ್ತದೆ. ಹತ್ತಿರ ಹತ್ತಿರ ಮಾರ್ಚಿ ತಿಂಗಳಲ್ಲಿ ಇದು ಕೊಯ್ಲಿಗೆ ಬರುತ್ತದೆ. ಈಗ ಎಲ್ಲಾ ಕಾಲದಲ್ಲಿ ಬೆಳೆಯಿಸುವ ಪ್ರಯತ್ನವೂ ನಡೆಯುತ್ತಿದೆ. ಗೆಣೆ ಎಳೆದು ತೊಗರಿ ಕಾಳು ನೆಡುವ ಪದ್ಧತಿಯೂ ಇದೆ. ಸಾಮಾನ್ಯವಾಗಿ ಕಡೆಯ ಹೊಲಗಳಿಗೆ ತೊಗರಿ ಹಾಕುವುದುಂಟು. ಆದರೆ ಕೆಲವು ಕಡೆ ಇದನ್ನೇ ಪ್ರಧಾನವಾಗಿ ಬೆಳೆಯುವ ಪ್ರದೇಶಗಳೂ ಉಂಟು. ಭೂಮಿಯನ್ನು ಚೆನ್ನಾಗಿ ಮೂರು ನಾಲ್ಕು ಉಕ್ಕೆ ಉತ್ತು ಸಾಧಾರಣವಾಗಿ ಗೊಬ್ಬರ ಹಾಕಿದರೆ ಸಾಕು. ತೊಗರಿ ಕಾಳನ್ನು ಕೆಮ್ಮಣ್ಣು ಕಲಸಿ ಒಡೆಯುವುದೊಂದು ಕಲೆ. ಆದುದರಿಂದಲೇ ಕೆಲವು ನಗರಗಳಲ್ಲಿ ತೊಗರಿ ಒಡೆಯುವವರ ಬೀದಿಗಳೇ ಇರುತ್ತವೆ. ಉತ್ತರ ಕರ್ನಾಟಕ ಭಾಗದಲ್ಲಿ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ.

ಹಲಸಂದೆ

ಇದು ನೆಲದ ಮೇಲೆ ಹಬ್ಬುವ ಜಾತಿ. ಅರ್ಧ ಅಡಿ ಬೆಳೆಯುವ ಗಿಡದ ಜಾತಿಯೂ ಇದೆ. ಇದಕ್ಕೆ ತಡಗುಣಿ ಎಂಬ ಮತ್ತೊಂದು ಹೆಸರೂ ಉಂಟು.ದಪ್ಪ ತಡಗುಣಿ,ಚಿಕ್ಕ ತಡಗುಣಿ ಎಂದು ಎರಡು ವಿಧ.ಹಬ್ಬು ಜಾತಿಯ ತಡಗುಣಿಯನ್ನು ಹೊಲಗದ್ದೆಗಳಿಗೆ ಬಿತ್ತಿ ಪ್ರಮುಖ ಬೆಳೆಯಾಗಿಯೂ ಬೆಳೆಯುತ್ತಾರೆ. ಈಗ ಇದರಲ್ಲಿ ಸುಧಾರಿತ ತಳಿಗಳು ಬಂದಿವೆ. ಗದ್ದೆಗಳಲ್ಲಿ ಮುಂಗಾರಿ ಬೆಳೆಯಾಗಿ ಬೆಳೆಯುತ್ತಾರೆ. ಹೊಲ ಅಥವಾ ಗದ್ದೆಯನ್ನು ಮೂರು ನಾಲ್ಕು ಬಾರಿ ಚೆನ್ನಾಗಿ ಉಳಬೇಕು. ಸಾಧಾರಣ ಮಟ್ಟಸದಲ್ಲಿ ಗೊಬ್ಬರ ಹಾಕಬೇಕು. ಅನಂತರ ಮೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಲಸಂದೆ

ತಿಂಗಳಿನಲ್ಲಿ ಚಿಟ್ಟೆ ತಡಗುಣಿಯನ್ನು ಬಿತ್ತುತ್ತಾರೆ. ಗೆಣೆ ಎಳೆದು ನೆಡುವುದೂ ಉಂಟು. ಹೆಚ್ಚು ಕಳೆ ಬಂದರೆ ಒಂದೆರಡು ಬಾರಿ ತೆಗೆಯಬೇಕು. ಮೂರು ತಿಂಗಳಿಗೆ ಇದು ಕೊಯ್ಲಿಗೆ ಬರುತ್ತದೆ. ತಡಗುಣಿಯ ಒಣಗಿದ ತರಳು ಬಿಡಿಸುವುದರಿಂದ ಗಿಡಗದ್ದೆಗೆ ಹಸಿರು ಗೊಬ್ಬರವೂ ಆಗುತ್ತದೆ. ಹೊಲವಾದರೆ ಗಿಡ ಕಿತ್ತು ದನಗಳಿಗೆ ಮೇವಾಗಿ ಉಪಯೋಗಿಸುತ್ತಾರೆ. ದಪ್ಪ ತಡಗುಣಿ ಅಥವಾ ಹಬ್ಬು ತಡಗುಣಿಯನ್ನು ಹೊಲಗಳ ಪ್ರಧಾನ ಬೆಳೆಯ ಮಧ್ಯೆ ಸಾಲು ಹಾಕಿ ಉಪಬೆಳೆಯಾಗಿ ಬೆಳೆಯುತ್ತಾರೆ. ಪ್ರಧಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಳೆಗೆ ಮಾಡುವ ವ್ಯವಸಾಯವೇ ಇದಕ್ಕೂ ಆಗುತ್ತದೆ. ಹಬ್ಬು ತಡಗುಣಿ ನವೆಂಬರ್‌ನಿಂದ ಕಾಯಿ ಬರುತ್ತದೆ. ಚಳಿಗಾಲದಲ್ಲಿ ಇದು ಚೆನ್ನಾಗಿ ಕಾಯಿ ಬಿಡುತ್ತದೆ. ಪ್ರಧಾನ ಬೆಳೆಯನ್ನು ಕೊಯ್ಲು ಮಾಡಿದ ಮೇಲೆ ಇದು ಬೆಳೆದು ಹಬ್ಬುತ್ತದೆ. ತಡಗುಣಿಯ ಹೊಟ್ಟು ದನಕರು ಮತ್ತು ಕುರಿ ಆಡುಗಳಿಗೆ ಒಳ್ಳೆಯ ಆಹಾರ.

ಹುರುಳಿ

ಅರ್ಧ ಆಡಿಗೂ ಕಡಿಮೆ ಎತ್ತರಕ್ಕೆ ಗುಪ್ಪೆಯಾಗಿ ಬೆಳೆಯುವ ಗಿಡ. ಹುರುಳಿ ದಕ್ಷಿಣ ಕರ್ನಾಟಕ ವಿಭಾಗದಲ್ಲಿ ಬಹಳವಾಗಿ ಉಪ ಬೆಳೆಯಾಗಿ, ಪ್ರಧಾನ ಬೆಳೆಯಾಗಿಯೂ ಬೆಳೆಯುತ್ತದೆ. ರಾಗಿ ನಾಟಿಯ ಮಧ್ಯೆ ಹುರುಳಿ ಬಿತ್ತಿ ಬೆಳೆಯುತ್ತಾರೆ. ಮಳೆ ಮಳೆಯಲ್ಲಿ ಹುರುಳಿ ಬಿತ್ತುವ ಕಾಲ. ಈ ಹೊತ್ತಿಗೆ ರಾಗಿ ಚೆನ್ನಾಗಿ ಬೆಳೆದಿರುತ್ತದೆ. ಹುರುಳಿಯನ್ನು ಬಿತ್ತಿ ಎರಡು ಹಲ್ಲಿನ ಕುಂಟೆ ಹೊಡೆಯುತ್ತಾರೆ. ಕಾಳುಗಳು ಮಣ್ಣಿನೊಳಗೆ ಸೇರುತ್ತವೆ. ಅನಂತರ ನಾಲ್ಕೈದು ದಿನಗಳಲ್ಲಿ ಎರಡು ಎಲೆಯೊಡೆದು ಗಿಡವಾಗುತ್ತದೆ. ಹುರುಳಿ ಗಿಡ ಒಡೆದು ಬೆಳೆಯಲಾರಂಭಿಸುವ ಹೊತ್ತಿಗೆ ಪ್ರಧಾನ ಫಸಲನ್ನು ಕೊಯ್ಲು ಮಾಡಿರುತ್ತಾರೆ. ಚಳಿಗಾಲದಲ್ಲಿ ಹುರುಳಿ ಹೂ ಬಿಟ್ಟು ಕಾಯಾಗುತ್ತದೆ. ಸುಮಾರಿಗೆ ಜನವರಿ - ಫೆಬ್ರುವರಿಯಲ್ಲಿ ಇದು ಕೊಯ್ಲಿಗೆ ಬರುತ್ತದೆ. ಹುರುಳಿಯ ಗಿಡವನ್ನೇ ಕಿತ್ತು ತಂದು ಕಣಗಳಲ್ಲಿ ಒಣಗಿಸುತ್ತಾರೆ. ಉದ್ದನೆಯ ಕೋಲಿನಿಂದ ಬಡಿದು ಕಾಳು ಮತ್ತು ಹೊಟ್ಟು ಬೇರೆ ಮಾಡುತ್ತಾರೆ. ಹುರುಳಿಯ ಹೊಟ್ಟು ದನಕರುಗಳಿಗೆ ಒಳ್ಳೆಯ ಆಹಾರ. ಎತ್ತುಗಳಿಗೆ ಹುರುಳಿ ಆಡಿಸಿ ಅಥವಾ ನುಚ್ಚುಮಾಡಿ ತಿನ್ನಿಸುತ್ತಾರೆ. ಇದನ್ನು ಪುದುರೆಯ ಆಹಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಹೇಳುವುದೂ ಉಂಟು. ಕಡೆಯ ಹೊಲಗಳಲ್ಲಿ ಹುರುಳಿ ಯನ್ನು ಬಿತ್ತಿ ಬೆಳೆಯುವುದೂ ಉಂಟು. ಈ ಬೆಳೆಗೆ ವಿಶೇಷ ವಾಗಿ ಹುಳ್ಳಿಹೊಲಗಳೆಂದೇ ಹೊಲ ಇರುತ್ತವೆ. ಒಂದೆರಡು ಉಕ್ಕೆ ಉಳುವುದನ್ನು ಬಿಟ್ಟರೆ ಇದಕ್ಕೆ ಹೆಚ್ಚೇನೂ ವ್ಯವಸಾಯ ವಿರುವುದಿಲ್ಲ.

ಕಡಲೆ

ಹುರುಳಿ ಗಿಡದಂತೆಯೇ ಆದರೆ ಅದಕ್ಕಿಂತ ಎತ್ತರವಾಗಿ ಬೆಳೆಯುತ್ತದೆ. ಕಡಲೆ ತಿಂದು ಕೈತೊಳೆದ ಹಾಗೆ ಎಂಬುದು ಗಾದೆಯ ಮಾತು. ಆದುದರಿಂದ ನಮ್ಮಲ್ಲಿ ಕಡಲೆ ಬಹಳ ಪ್ರಸಿದ್ಧವಾಗಿತ್ತೆಂದು ತಿಳಿಯುತ್ತದೆ. ಆಕ್ಟೋಬರ್ ತಿಂಗಳಿನಲ್ಲಿ ಬಿತ್ತನೆ ಮಾಡಬೇಕು. ಎರಡೂವರೆ ತಿಂಗಳಿಗೆ ಕಾಯಾಗುತ್ತದೆ. ಸೊಪ್ಪಿನ ಕಡಲೆ ಎಂದು ಕಾಯಾಗಿರುವಾಗಲೇ ತಿನ್ನುತ್ತಾರೆ. ಡಿಸೆಂಬರ್, ಜನವರಿ ತಿಂಗಳಲ್ಲಿ ಯಾವ ಬಸ್ ನಿಲ್ದಾಣದಲ್ಲಿಯೂ ಇದನ್ನು ಕಾಣಬಹುದು. ಎರೆ ನೆಲದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಭೂಮಿಯನ್ನು ಚೆನ್ನಾಗಿ ಉತ್ತು ಗೊಬ್ಬರ ಚೆಲ್ಲಿ ಹದಮಾಡ ಬೇಕು. ಭೂಮಿಯಲ್ಲಿ ಮಧ್ಯಮ ತೇವವಿದ್ದಾಗ ಕಾಳನ್ನು ಚೆಲ್ಲಿ ಉಳುತ್ತಾರೆ. ಮುಂದೆ ಮಳೆ ಇಲ್ಲದಿದ್ದರೂ ಇಬ್ಬನಿಯಲ್ಲಿ ನೀರಿನ ಅಂಶ ಹೀರಿ ಇದು ಬೆಳೆಯುತ್ತದೆ. ಬಿತ್ತುವುದಾದ ಮೇಲೆ ವ್ಯವಸಾಯವೇನೂ ಇರುವುದಿಲ್ಲ. ಬಲಿತು ಒಣಗಿದ ಗಿಡ ಗಳನ್ನೇ ಕಿತ್ತು ಕಣದಲ್ಲಿ ಹರಡಿ ಬಡಿದು ಕಾಳು ಬೇರೆ ಮಾಡು ತ್ತಾರೆ. ಈ ಒಣ ಕಡಲೆಯನ್ನು ಹುರಿದು ಹುರಿಗಡಲೆ ಮಾಡು ತ್ತಾರೆ. ಕಡಲೆ ಬೆಲ್ಲ ನಮ್ಮ ಮಕ್ಕಳಿಗೆ ಬಹು ಪ್ರೀತಿ. ಕಡಲೆ ಯಿಂದ ಬೇಳೆಯನ್ನೂ ಮಾಡುತ್ತಾರೆ.

CC-O. Vidyabharathi Research & Publication Centre, Sringeri

CC-O. In Public Domain. Digitized by eGangotri

ಉದ್ದು, ಹೆಸರು

ಇವು ಸಹ ಹುರುಳಿಯಂತಹ ಆದಕ್ಕಿಂತಲೂ ಚಿಕ್ಕದಾದ ಗಿಡಗಳು. ಅಕ್ಟೋಬರ್ ತಿಂಗಳಿನಲ್ಲಿ ಬಿತ್ತುತ್ತಾರೆ. ಗೆಣೆ ಎಳೆದು ನೆಡುವ ಪದ್ಧತಿಯೂ ಉಂಟು. ಗೆಣೆ ಎಳೆದು ನೆಟ್ಟರೆ ಕುಂಟೆ ಹೊಡೆದು ಕಳೆ ತೆಗೆಯುತ್ತಾರೆ. ಬಿತ್ತಿದ ಹೊಲಗಳಲ್ಲಿ ಕಳೆ ಕಿತ್ತು ತೆಗೆಯುತ್ತಾರೆ. ಇವೆಲ್ಲವನ್ನು ಕಡಿಮೆ ಪ್ರದೇಶದಲ್ಲಿ ಮಾತ್ರ ಬೆಳೆಯುತ್ತಾರೆ. ಹುರುಳಿ, ಅವರೆಯಂತೆಯೇ ಜನವರಿ–ಫೆಬ್ರವರಿಯಲ್ಲಿ ಕಟಾವಿಗೆ ಬರುತ್ತದೆ. ಗಿಡವನ್ನೇ ಕಣದಲ್ಲಿ ಒಣಗಿಸಿ ಬಡಿದು ಕಾಳು ಬೇರೆ ಮಾಡುತ್ತಾರೆ. ಹೆಸರು, ಉದ್ದು ನಮ್ಮ ಅನೇಕ ಧಾರ್ಮಿಕ ಕಾರ್ಯಗಳಲ್ಲಿಯೂ ಪಾಲುಗೊಳ್ಳುತ್ತವೆ.

ಎಣ್ಣೆ ಬೀಜದ ಬೆಳೆಗಳು

ಎಣ್ಣೆಗೆ ಜಗತ್ಪ್ರಸಿದ್ಧಿ ಇದೆ. ಒಂದು ಕಾಲಕ್ಕೆ ರಾತ್ರಿಯ ಹೊತ್ತು ಬೆಳಕು ಮಾಡಲು ಎಣ್ಣೆ ಬೇಕಾಗಿತ್ತು. ಈಗ ಸೀಮೆ ಎಣ್ಣೆ, ವಿದ್ಯುತ್ತು ಮತ್ತು ಅನಿಲಗಳು ಆ ಕೆಲಸ ಮಾಡುತ್ತಿವೆ. ಈ ಎಲ್ಲವೂ ಹೊರಗಿನಿಂದ ಬಂದುವು. ನಮ್ಮಲ್ಲಿ ಕಾಳು ಮತ್ತು ಬೀಜಗಳಿಂದ ತೆಗೆದ ಎಣ್ಣೆಯನ್ನೇ ಬೆಳಕಿಗಾಗಿ ಉಪಯೋಗಿಸುತ್ತಿದ್ದರು. ಜನಸಂಖ್ಯೆ ಬೆಳೆದಂತೆಲ್ಲಾ ಆಡುಗೆಗೆ ತುಪ್ಪ ಉಪಯೋಗಿಸುವುದು ಕಷ್ಟದಾಯಕವಾಯಿತು. ತಲೆಗೆ ಮೈಗೆ ಎಣ್ಣೆ ಹಚ್ಚಲು ಯಾವುದಾದರೊಂದು ಎಣ್ಣೆ ಬೇಕಾಯಿತು. ಆಗ ಮನುಷ್ಯ ಪ್ರಕೃತಿದತ್ತವಾಗಿ ಬೆಳೆದ ಅನೇಕ ಕಾಳುಗಳನ್ನು ಪರೀಕ್ಷಿಸಿ ಕಲಿತನೆಂದು ಹೇಳಬಹುದು. ಅನಂ

Sri Vidyabharathi Book Centre, Shimoga

CC-O. In Public Domain. Digitized by eGangotri

ತರ ತಾನೇ ಅವನ್ನು ಬೆಳೆಯಲಾರಂಭಿಸಿದನು. ಅವುಗಳಲ್ಲಿ ಕೆಲವನ್ನು ಅಡುಗೆಗೂ, ಕೆಲವನ್ನು ಬೆಳಕಿಗೂ, ಕೆಲವನ್ನು ತಲೆಗೆ, ಮೈಗೆ ಹಚ್ಚಲೂ ವಿಭಾಗಿಸಿಕೊಂಡನು. ಆದುದರಿಂದಲೇ ಈ ಎಣ್ಣೆ ಜೀವನಾವಶ್ಯಕ ಪಟ್ಟಿಯಲ್ಲಿ ಸೇರಿದೆ.

ಕಡಲೇಕಾಯಿ

ಎಣ್ಣೆಕಾಳುಗಳಲ್ಲಿ ಅತ್ಯಂತ ಪ್ರಸಿದ್ಧವಾದುದು. ಆ ಉದ್ದೇಶಕ್ಕಾಗಿಯೇ ಅತ್ಯಂತ ಹೆಚ್ಚು ಬೆಳೆಯುತ್ತಾರೆ. ಕರ್ನಾಟಕ ರಾಜ್ಯದ ಪ್ರಮುಖ ಎಣ್ಣೆಕಾಳು ಬೆಳೆ. 8,37,053 ಹೆಕ್ಟೇರು ಗಳಲ್ಲಿ ಕಡಲೇಕಾಯಿ ಬೆಳೆಯುತ್ತಾರೆ. ಇದು ಮನುಷ್ಯರ ಮತ್ತು ದನಗಳ ಆಹಾರವಾಗಿಯೂ ಕೆಲಸ ಮಾಡುತ್ತದೆ. ಕೃತಕ ತುಪ್ಪ ಮತ್ತು ಸಾಬೂನು ತಯಾರಿಕೆಗೂ ಇದರ ಎಣ್ಣೆಯನ್ನು ಉಪಯೋಗಿಸುತ್ತಾರೆ. ಉತ್ತರಕರ್ನಾಟಕದ ಮೈದಾನ ಪ್ರದೇಶದಲ್ಲಿ ಇದು ಪ್ರಮುಖ ಬೆಳೆಯಾಗಿ ಬೆಳೆಯುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಮುಂಗಾರಿ ಬೆಳೆಯಾಗಿ ಮಾತ್ರ ಬೆಳೆಯುತ್ತದೆ. ಕಡಲೆ ಹೊಲಗದ್ದೆಗಳೆರಡರಲ್ಲಿಯೂ ಬೆಳೆಯುತ್ತದೆ. ಅವಶ್ಯವಿದ್ದಾಗ ಮಾತ್ರ ನೀರು ಹಾಯಿಸಿದರೆ ಸಾಕು. ಆದರೆ ಕಡಲೆಕಾಯಿ ಸ್ವಭಾವತಃ ಒಣ ಬೆಳೆ ಎಂದೇ ಹೇಳಬಹುದು. ಕಡಲೆಕಾಯಿಯಲ್ಲಿ ಹಬ್ಬುಕಡಲೆ, ಗಿಡಕಡಲೆ ಎಂದು ಎರಡು ವಿಧ ಉಂಟು. ಗಿಡಕಡಲೆ ಬಲಿತ ನಂತರ ಗಿಡ ಹಿಡಿದು ಕಿತ್ತುಕೊಂಡರೆ ನೆಲದೊಳಗಿನ ಕಾಯಿ ಸಹಿತ ಮೇಲೆ ಬರುತ್ತದೆ. ಹಬ್ಬುಕಡಲೆಯನ್ನು ಉತ್ತು ಆಯ್ದು ತೆಗೆಯಬೇಕು.

ಕಡಲೆಕಾಯಿ ಹಾಕುವ ಹೊಲಗದ್ದೆಗಳನ್ನು ಚೆನ್ನಾಗಿ ಉತ್ತು ಸೆತ್ತೆ ತೆಗೆಯಬೇಕು. ಆನಂತರ ಗೊಬ್ಬರ ಚೆಲ್ಲಿ ಹಲುಬೆ ಹೊಡೆದು ಮಟ್ಟಮಾಡಬೇಕು. ಬೀಜವನ್ನು ಎಡೆದು ಇಟ್ಟು

Sri Vidyabharathi Book Centre, Sringeri

CC-0. In Public Domain. Digitized by eGangotri

ಕೊಂಡಿರುತ್ತಾರೆ. ಮಳೆ ಬಿದ್ದು ಹದವಾದಾಗ ಗೆಣೆ ಎಳೆದು ನೆಡುತ್ತಾರೆ. ಒಂದು ಗುಣಿಗೆ ಒಂದು ಬೀಜ ಮಾತ್ರ ನೆಡುತ್ತಾರೆ. ನೇಗಿಲಿನಿಂದ ಸಾಲು ಹೊಡೆದು ಕಾಳು ಉದುರಿಸುವುದೂ ಉಂಟು. ಹಬ್ಬುಕಡಲೆಯನ್ನು ಕೆಲವು ಕಡೆ ಬಿತ್ತನೆ ಮಾಡುತ್ತಾರೆ. ನಾಲ್ಕೈದು ದಿನಕ್ಕೆ ಸಸಿ ಹುಟ್ಟಿ ಮೇಲೆ ಬರುತ್ತದೆ. ಗಿಡ ಮೂರು ನಾಲ್ಕು ಎಲೆಗಳಾದ ಮೇಲೆ ತಗರದಾಳು ಮತ್ತು ಎರಡು ಹಲ್ಲಿನ ಕುಂಟೆ ಹೊಡೆಯುತ್ತಾರೆ. ಕಳೆ ಕೀಳುತ್ತಾರೆ. ಹೂವು ಕಾಣಿಸಿಕೊಳ್ಳುವವರೆಗೆ ವ್ಯವಸಾಯ ನಡೆಯುತ್ತದೆ. ಆಮೇಲೆ ಸಾಲುಗಳ ಮಧ್ಯೆ ನೇಗಿಲು ಹೊಡೆದು ಗಿಡಗಳ ಬುಡಕ್ಕೆ ಮಣ್ಣು ಒತ್ತರಿಸುತ್ತಾರೆ. ಇದರಿಂದ ಎರಡು ಉಪಯೋಗಗಳುಂಟು. ಒಂದು ಗಿಡ ಕಾಯಿ ಕಟ್ಟಲು ಅನುಕೂಲವಾಗುತ್ತದೆ. ಮತ್ತೊಂದು ಗಿಡ ಕೀಳಲು ಭೂಮಿ ಮೃದುವಾಗಿರುತ್ತದೆ. ಮೂರು ಮೂರೂವರೆ ತಿಂಗಳಿಗೆ ಕಡಲೆಕಾಯಿ ಬಲಿತು ಕಟಾವಿಗೆ ಬರುತ್ತದೆ. ಗಿಡವನ್ನು ಕಿತ್ತು ಕಣಗಳಲ್ಲೊ, ಅರೆಯ ಮೇಲೋ ಹಾಕಿ ಕಾಯಿ ಬೇರೆ ಮಾಡುತ್ತಾರೆ. ಈಗ ಸ್ಥಳೀಯ ಜಾತಿಗಳೊಂದಿಗೆ ಅನೇಕ ಹೊಸ ತಳಿಗಳು ಬಂದಿವೆ.

ಎಳ್ಳು

ಎರಡು ಅಡಿ ಎತ್ತರ ಬೆಳೆಯುವ ತುಂಬೆಯುಗಿಡದಂತಹ ಗಿಡ. ಎಣ್ಣೆ ಎಂಬ ಪದ ಇದರ ಎಣ್ಣೆಯಿಂದಲೇ ಬಂದುದೆಂದು ಹೇಳುತ್ತಾರೆ. ಎಳ್ + ನೆಯ್ = ಎಣ್ಣೆಯಾಯಿತೆಂದು ವಿದ್ವಾಂಸರ ಅಭಿಪ್ರಾಯ. ಎಳ್ಳೆಣ್ಣೆಯನ್ನು ಮೈಗೆ ಹಚ್ಚಲೂ ಮತ್ತು ಅಡುಗೆಗೂ ಉಪಯೋಗಿಸುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಎಳ್ಳು ಮುಂಗಾರಿ ಬೆಳೆಯಾಗಿ ಮಾತ್ರ ಬೆಳೆಯುತ್ತದೆ. ಮೇ–ಜೂನ್ ತಿಂಗಳಲ್ಲಿ ಬಿತ್ತನೆಯಾದ ಮಳೆ ಬಿದ್ದೊಡನೆಯೇ

CC-0. Vasishtha Tripathi Collection by Siddhanta eGangotri Gyaan Central, Mumbai. Digitized by eGangotri Sri Jagadguru Kalidasa Sanskrit Book Centre, Sringeri

CC-O. In Public Domain. Digitized by eGangotri

ಹೊಲ ಅಥವಾ ಗದ್ದೆಯನ್ನು ಉತ್ತು ಹದ ಮಾಡುತ್ತಾರೆ. ಆನಂತರ ಗೊಬ್ಬರ ಚೆಲ್ಲಿ, ಸೆತ್ತೆತೆಗೆದುಬಿಡುತ್ತಾರೆ. ಮತ್ತೊಂದು ಹದ ಮಳೆ ಬಿದ್ದಾಗ ಎಳ್ಳು ಚೆಲ್ಲಿ, ಉತ್ತು ಹಲುಬೆ ಹೊಡೆಯುತ್ತಾರೆ. ನಾಲ್ಕೈದು ದಿನದಲ್ಲಿ ಆದು ಮೊಳಕೆಯಾಗಿ ಮೇಲೆ ಬರುತ್ತದೆ. ಒಂದು ವೇಳೆ ಹಾಕಿದ ಕೂಡಲೇ ಜೋರು ಮಳೆ ಬಿದ್ದರೆ ಭೂಮಿಯ ಮೇಲ್ಕೈಗಟ್ಟಿಯಾಗುತ್ತದೆ. ಆಗ ಕಾಳು ಹುಟ್ಟಿ ಮೇಲೆ ಬರಲು ಅಡಚಣೆಯಾಗುತ್ತದೆ. ಆದುದರಿಂದ ಮತ್ತೆ ಹಲುಬೆಹೊಡೆದು ಮೇಲ್ಭಾಗ ಮೃದುವಾಗುವಂತೆ ಮಾಡುತ್ತಾರೆ. ಒಂದೆರಡು ಬಾರಿ ಕಳೆ ತೆಗೆಯುವುದನ್ನು ಬಿಟ್ಟರೆ ಬೇರೇನೂ ವ್ಯವಸಾಯವಿರುವುದಿಲ್ಲ.

ಕಾರುಹುಣ್ಣಿಮೆಯ ಹೊತ್ತಿಗೆ ಎಳ್ಳು ಕಪ್ಪಾಗುತ್ತದೆಂಬ ನಂಬಿಕೆ. ತುದಿಯ ಕಾಯಿಗಳ ಕಾಳೂ ಕಪ್ಪಾಗ ಹತ್ತಿದಾಗ ಬುಡಸಹಿತ ಕೀಳುತ್ತಾರೆ. ಎಳ್ಳು ಕೊಯ್ಲಿಗೆ ಬರಲು ನಾಲ್ಕು ತಿಂಗಳಿಗಿಂತ ಹೆಚ್ಚು ಕಾಲ ಹಿಡಿಯುತ್ತದೆ. ಕಿತ್ತ ಎಳ್ಳುಗಿಡವನ್ನು ಆರೆಗಳ ಮೇಲೆ ಅಥವಾ ಕಣದಲ್ಲಿ ಹತ್ತು–ಹದಿನೈದು ದಿನ ಗುಡ್ಡೆ ಹಾಕುತ್ತಾರೆ. ಆದು ಮಾಗುತ್ತದೆ. ಚೆನ್ನಾಗಿ ಬಿಸಿಲಿರುವ ದಿನ ಗುಡ್ಡೆಯಿಂದ ತೆಗೆದು ಹರಡುತ್ತಾರೆ. ಬಿಸಿಲಿಗೆ ಮಾಗಿದ ಕಾಯಿಗಳು ಸಿಡಿದು ಕಾಳು ಉದುರುತ್ತವೆ. ಹೀಗೆ ನಾಲ್ಕೈದು ಬಾರಿ ಉದುರಿಸಿಯಾದಮೇಲೆ ಕಡ್ಡಿಯನ್ನು ಒಲೆಗೆ ಒಟ್ಟಲು ಉಪಯೋಗಿಸುತ್ತಾರೆ. ಎಳ್ಳು ನಮ್ಮ ಧಾರ್ಮಿಕ ಪ್ರಕ್ರಿಯೆಗಳಲ್ಲಿ ಸ್ಥಾನ ಪಡೆದ ಧಾನ್ಯವಾಗಿದೆ.

ಹುಚ್ಚೆಳ್ಳು

ಎಳ್ಳಿನ ಹಾಗೆ ಕಪ್ಪಗಿದ್ದರೂ ಕಾಳುಗಳು ಗುಂಡಗೆ ಚೂಪಾಗಿರುತ್ತವೆ. ಹುಚ್ಚು ಗಿನಾಬ್ಬರೆ ಮತ್ತು ವ್ಯವಸಾಯವಿಲ್ಲದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲಿ ಹಾಕಿದರೂ ಚೆನ್ನಾಗಿ ಬೆಳೆಯುತ್ತದೆ. ಇದನ್ನು ಉಪ ಬೆಳೆಯಾಗಿ ಮತ್ತು ಪ್ರಧಾನ ಬೆಳೆಯಾಗಿಯೂ ಬೆಳೆಯುತ್ತಾರೆ. ರಾಗಿ, ಜೋಳ, ನವಣೆ, ಸಾಮೆ ಇತ್ಯಾದಿ ಹೈನು ಬೆಳೆಗಳ ಮಧ್ಯೆ ಸಾಲುಹಾಕಿ ಬೆಳೆಯುತ್ತಾರೆ. ಕಡೆಯ ಹೊಲಗಳಿಗೆ ಬಿತ್ತಿಯೂ ಬೆಳೆಯುತ್ತಾರೆ. ಭೂಮಿಯನ್ನು ಎರಡು ಮೂರು ಉಕ್ಕೆ ಉತ್ತರೆ ಸಾಕು. ಇದು ಗೊಬ್ಬರ ಕೇಳುವುದೇ ಅಪರೂಪ. ಆರಿದ್ರಾ ಮಳೆಯಲ್ಲಿ ಬಿತ್ತುತ್ತಾರೆ. ದೀಪಾವಳಿಯ ಕಾಲದಲ್ಲಿ ಹಳ್ಳಿಗಳ ಕಡೆ ಎತ್ತರವಾದ ಜಾಗದಲ್ಲಿ ನಿಂತು ನೋಡಿದರೆ ಎಲ್ಲೆಲ್ಲೂ ಹಳದಿಯ ಚಿಕ್ಕ ಹೂವುಗಳು ಕಾಣಿಸುತ್ತವೆ. ಅವೇ ಹುಚ್ಚೆಳ್ಳಿನ ಹೂವುಗಳು. ಗ್ರಾಮಸ್ಥರು ಹುಚ್ಚೆಳ್ಳು ಹೂ ಕಂಡರೆ ಬೆಳೆ ಬಂದಂತೆ ಎಂದು ನಂಬುತ್ತಾರೆ. ಕಾರ್ತಿಕ ಮಾಸದಲ್ಲಿ ಮನೆಯ ಮುಂದೆ ಹುಚ್ಚೆಳ್ಳು ಹೂಮುಡಿಸಿ ದೀಪವಿಡುತ್ತಾರೆ. ಫೆಬ್ರವರಿಯವರೆಗೆ ಇದರ ಕಟಾವಾಗುತ್ತದೆ. ಮಳೆ ಮಳೆಯಲ್ಲೂ ಇದನ್ನು ಹಾಕುವುದುಂಟು. ಬುಡವನ್ನು ಕೊಯ್ದು ಕಣದಲ್ಲಿ ಒಣಗಿಸಿ ಬಡಿಯುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ತುಪ್ಪಕ್ಕೆ ಬದಲಾಗಿ ಹುಚ್ಚೆಳ್ಳೆಣ್ಣೆಯನ್ನು ಉಪಯೋಗಿಸುತ್ತಾರೆ.

ಹರಳು

ತಲೆಗೆ ಹಚ್ಚುವ ಎಣ್ಣೆಯಲ್ಲಿ ಪ್ರಧಾನವಾದ ಎಣ್ಣೆಯನ್ನು ಕೊಡುವ ಬೀಜ. ಎಣ್ಣೆಸ್ನಾನ ಮಾಡುವ ಪದ್ಧತಿ ನಮ್ಮಲ್ಲಿ, ಬಹು ಪ್ರಾಚೀನವಾದುದು. 'ಗಾಣಗಿತ್ತಿ ಆಯ್ಯೋ ಎಂದರೆ ನೆತ್ತಿ ತಣ್ಣಗಾದೀತೆ' ಎಂಬುದು ಗಾದೆ. ಹರಳೆಣ್ಣೆ ತಂಪಿಗೆ ಹೆಸರು ವಾಸಿಯಾದುದು. ಇದು ಔಷಧವಾಗಿಯೂ ಉಪಯೋಗವಾಗುತ್ತದೆ. ಹರಳಿಗೆ ಜಂಗಲ್ ಎಂಬ ಹೆಸರೂ ಇದೆ. ಇದರಲ್ಲಿ

Sri Vidyaranya Sanskrit Book Centre, Sringeri

CC-O. In Public Domain. Digitized by eGangotri

ದಪ್ಪಹಳ್ಳು ಚಿಟ್ಟಳ್ಳು ಎಂದು ಎರಡು ವಿಧ. ಹರಳು ಎಂಟು ಹತ್ತು ಅಡಿ ಮರದ ಆಕಾರವಾಗಿ ಬೆಳೆಯುವ ಗಿಡ. ಭರಣಿ ಮಳೆಯಲ್ಲಿ ಐದಾರು ಅಡಿ ಅಂತರಕ್ಕೆ ಉದ್ದ ಅಡ್ಡ ಸಾಲು ಹೊಡೆದು ಹರಳು ನೆಡುತ್ತಾರೆ. ಇದು ಬೆಳೆದ ಜಾಗದಲ್ಲಿ ಬೇರೇನೂ ಬೆಳೆಯುವುದಿಲ್ಲವೆಂಬ ನಂಬಿಕೆ ಇದೆ. ಪ್ರಾಯಃಶಃ ಗಿಡ ಬೆಳೆದು ಹರಡಿಕೊಳ್ಳುವುದರಿಂದ ಅದರ ನೆರಳಲ್ಲಿ ಏನೂ ಬೆಳೆಯದಿರಬಹುದು. ಆದುದರಿಂದ ಹರಳು ಹೊಲಗಳೇ ಇರುತ್ತವೆ. ನೆಟ್ಟು ಕಳೆ ತೆಗೆಯುವುದನ್ನು ಬಿಟ್ಟರೆ ಬೇರೇನೂ ವ್ಯವಸಾಯವಿಲ್ಲ. ಆದರೆ ಗಿಡ ಬೆಳೆದ ಮೇಲೆ ಬುಡಕ್ಕೆ ಗೊಬ್ಬರ ಹಾಕುತ್ತಾರೆ. ಹರಳು ಫಲಕೊಡಲು ಎಂಟು ತಿಂಗಳು ಬೇಕು. ಪ್ರತಿ ಕೊನರಿದ ತುದಿಯಲ್ಲಿ ಮೂರು ಅಡಿಯವರೆಗಿನ ದ್ರಾಕ್ಷಿಯಂತಹ ಗೊಂಚಲು ಕಾಯಿ ಬಿಡುತ್ತದೆ. ಈ ಗೊಂಚಲು ನೆಟ್ಟಗಿರುತ್ತವೆ. ಬಲಿತಂತೆ ಅವುಗಳನ್ನು ಮುರಿದು ಒಣಗಿಸುತ್ತಾರೆ. ಆನಂತರ ಬಡಿಯುತ್ತಾರೆ. ಹಿತ್ತಲು ಬೆಳೆಯಾಗಿ ಇದು ಎರಡು ಮೂರು ವರ್ಷ ಇರುತ್ತದೆ. ಹರಳು ಕುಪ್ಪೆ ಬೇಯಿಸಿ ಎಣ್ಣೆ ತೆಗೆಯುತ್ತಾರೆ.

ಕುಸುಬೆ ಮತ್ತು ಅಗಸೆ

ಉತ್ತರ ಕರ್ನಾಟಕದ ಮೈದಾನ ಪ್ರದೇಶದಲ್ಲಿ ಬೆಳೆಯುವ ಎರಡು ಎಣ್ಣೆಕಾಳಿನ ಬೆಳೆಗಳು. ಕುಸುಬೆಎಣ್ಣೆ ಆ ಭಾಗದಲ್ಲಿ ಬಹಳ ಪ್ರಸಿದ್ಧಿಯಾಗಿದೆ. ಇವುಗಳನ್ನು ಸಾಮಾನ್ಯವಾಗಿ ಉಪ ಬೆಳೆಗಳಾಗಿ ಬೆಳೆಯುತ್ತಾರೆ. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಹುಚ್ಚೆಳ್ಳಿದ್ದಂತೆ ಉತ್ತರ ಕರ್ನಾಟಕದಲ್ಲಿ ಕುಸುಬೆ. ವ್ಯವಸಾಯದ ವಿಶೇಷ ಅಂಶಗಳೇನೂ ಕಂಡುಬಂದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಣಿಜ್ಯ ಬೆಳೆಗಳು

ಬೇಸಾಯಗಾರ ಮೊದಲು ಬೆಳೆಯುತ್ತಿದ್ದ ಬೆಳೆಗಳೆಂದರೆ ಆಹಾರ ಬೆಳೆಗಳು. ಆವುಗಳನ್ನು ಸ್ವಂತ ಉಪಯೋಗಕ್ಕೂ ವ್ಯಾಪಾರಕ್ಕೂ ಬಳಸುತ್ತಿದ್ದ. ಅಂದಿನ ವ್ಯಾಪಾರವೆಂದರೆ ತಾನು ಹೆಚ್ಚಿಗೆ ಬೆಳೆದ ಬೆಳೆಯನ್ನು ಮತ್ತೊಬ್ಬ ಹೆಚ್ಚಾಗಿ ಬೆಳೆದ ಬೇರೆಯ, ಆದರೆ ತನಗೆ ಅಗತ್ಯವಾದ ಬೆಳೆಗೆ ವಿನಿಮಯವಾಗಿ ಕೊಟ್ಟು ಅವನ್ನು ಪಡೆಯುತ್ತಿದ್ದ. ಕಾಲ ಕ್ರಮೇಣ ಈ ವಿನಿಮಯ ಪದ್ಧತಿ ತಪ್ಪಿ ತನ್ನ ಹೆಚ್ಚಿನ ಬೆಳೆಯನ್ನು ಹಣಕ್ಕಾಗಿ ಮಾರುವ ಕ್ರಮ ಏರ್ಪಟ್ಟಿತು. ಹಣಕ್ಕಾಗಿ ಮಾರಲು ಹೊರಟಾಗ ತುಂಬ ಹಣ ಬರುವ ಬೆಳೆಯನ್ನು ಏಕೆ ಬೆಳೆಯಬಾರದು ಎಂದು ಯೋಚಿಸಿದ. ಹಾಗೆ ಹೆಚ್ಚು ಹಣ ಬರುವ ಕಬ್ಬು, ಹತ್ತಿ, ಹೊಗೆಸೊಪ್ಪು ಮತ್ತು ಹಿಪ್ಪೆನೇರಳೆ ಮೊದಲಾದ ಬೆಳೆಗಳನ್ನು ಬೆಳೆಯಲು ತೊಡಗಿದ. ಇವು ಮಾರಾಟಕ್ಕಾಗಿ ಬೆಳೆದ ಬೆಳೆಗಳಾದ್ದರಿಂದ ಇವಕ್ಕೆ ವಾಣಿಜ್ಯ ಬೆಳೆಗಳೆಂದು ಹೆಸರಾಯಿತು.

ಕಬ್ಬು

ಇದು ನಮ್ಮ ದೇಶದ ಅತ್ಯಂತ ಪ್ರಾಚೀನವಾದ ಬೆಳೆ. ಸಾವಿರಾರು ವರ್ಷಗಳಿಂದ ಇದರ ಉಲ್ಲೇಖ ದೊರೆಯುತ್ತದೆ. ಕಾಡಿನಲ್ಲಿ ಬೆಳೆಯುತ್ತಿತ್ತು. ಈ ಜಾತಿಯ ಯಾವುದೊ ಸಿಹಿ ಅಂಶಕ್ಕಾಗಿ ತಾನು ಬೆಳೆಯಲಾರಂಭಿಸಿದ. ಅದರಿಂದ ಬೆಲ್ಲ ಸಕ್ಕರೆಗಳನ್ನು ಮಾಡಲಾರಂಭಿಸಿದ. ಇಂದು ಕಬ್ಬು ಸಿಹಿಯ ಸಂಕೇತವಾಗಿದೆ. ಕಬ್ಬಿಗೆ ಬೀಜ ಆದರದೇ ಭಾಗ. ಕಣ್ಣುಗಳುಳ್ಳ ಕಬ್ಬಿನ ಕಾಂಡವೇ ಉಪಯೋಗಕ್ಕೆ ಬರುವ ಪದಾರ್ಥವಾಗುತ್ತದೆ. ಕಬ್ಬು

CC-O. Jangamwadi Math Collection. Digitized by eGangotri

CC-O. In Public Domain. Digitized by eGangotri

ಇಂದು ನೀರಾವರಿ ಬೆಳೆಯಾಗಿ ಪ್ರಸಿದ್ಧಿಗೆ ಬಂದಿದೆ. ದೇಶಾದ್ಯಂತ ನೂರಾರು ಸಕ್ಕರೆ ಕಾರ್ಖಾನೆಗಳಿಗೆ ಆಶ್ರಯ ನೀಡಿದೆ. ಇಷ್ಟಾದರೂ ಸಕ್ಕರೆ ಐಶ್ವರ್ಯದ ಸಂಕೇತವಾಗಿದೆ. ಕಬ್ಬನ್ನು ಆರೆ ನೀರಾವರಿ ಮತ್ತು ಮಳೆ ನೀರಿನಿಂದಲೂ ಬೆಳೆಯುತ್ತಾರೆ.

ಕಬ್ಬು ಆಯ್ಕೆಯ ಬೆಳೆ. ಇದರ ವ್ಯವಸಾಯ ದುಬಾರಿ. ಆದುದರಿಂದ ನಿಗದಿಯಾದ ಜಾಗದಲ್ಲಿ ಎಕರೆಗೆ ಮತ್ತು ಗುಣಿಗಳ ಲೆಕ್ಕದಲ್ಲಿ ಕಬ್ಬು ಹಾಕುತ್ತಾರೆ. ಹಿಂದಿನ ಕಾಲದಲ್ಲಿ ಸಾವಿರ ಗುಣಿ ಕಬ್ಬು ಹಾಕುತ್ತೇವೆನ್ನುತ್ತಿದ್ದರು. ಈಗ ನೀರಾವರಿ ಯೋಜನೆಗಳಲ್ಲಿ ಎಕರೆ ಎಂದು ಹೇಳುತ್ತಾರೆ. ಕಬ್ಬು ಹಾಕಲು ಆಯ್ಕೆ ಮಾಡಿದ ಜಾಗವನ್ನು ಮೊದಲು ಸುತ್ತ ಬದು ಕೊಚ್ಚಿ ಉಳುತ್ತಾರೆ. ಹೀಗೆ ನಾಲ್ಕೈದು ಸಾರಿ ಮಣ್ಣು ಚೆನ್ನಾಗಿ ಪುಡಿಯಾಗುವವರೆಗೆ ಉಳುತ್ತಾರೆ. ಹೆಂಟೆಗಳಿದ್ದರೆ ಅದನ್ನು ಒಡೆದು ಪುಡಿಮಾಡುತ್ತಾರೆ. ಎಕರೆಗೆ ಹದಿನೈದು ಗಾಡಿಯವರೆಗೆ ಗೊಬ್ಬರ, ಕೆಮ್ಮಣ್ಣು ಹಾಕುತ್ತಾರೆ. ಇದೆಲ್ಲಾ ಭೂಮಿಯಲ್ಲಿ ಬೆರೆತುಕೊಳ್ಳುವಂತೆ ಮತ್ತೆ ಉಳುತ್ತಾರೆ. ಗದ್ದೆ ಸಿದ್ಧವಾದ ಮೇಲೆ ಬೀಜ ಕತ್ತರಿಸುವುದು. ತಮ್ಮದೇ ಗದ್ದೆಯಲ್ಲಿ ಬೇರೆ ಕಡೆ ಕಬ್ಬಿದ್ದರೆ ಅದರಲ್ಲಿಯೇ ಬೀಜ ಕತ್ತರಿಸುತ್ತಾರೆ. ಇಲ್ಲದಿದ್ದರೆ ಬೇರೆಯವರಿಂದ ಕೊಂಡುಕೊಳ್ಳುತ್ತಾರೆ. ಬೀಜದ ಕಬ್ಬಿಗೆ ಹತ್ತು ತಿಂಗಳಿಗಿಂತ ಹೆಚ್ಚು ವಯಸ್ಸಾಗಿರಬಾರದು. ಬಲಿತ ಕಬ್ಬು ಒಳಗೆ ಬೆಂಡು ಬೀಳುವುದರಿಂದ ಮತ್ತು ಕಣ್ಣು ಒಣಗಿರುವುದರಿಂದ ಹುಟ್ಟುವುದಿಲ್ಲ. ಹೀಗೆ ಬೀಜ ತಂದ ಮೇಲೆ ಗದ್ದೆಗೆ ಸಾಲು ಹೊಡೆಯುತ್ತಾರೆ. ಈ ಸಾಲುಗಳು ಎರಡು ಮೂರು ಅಡಿ ಅಂತರ ಇರುತ್ತವೆ. ಬೀಜದ ಕಬ್ಬನ್ನು ಆಯುಧದಿಂದ ಸವರುವಂತಿಲ್ಲ. ಕೈಯಿಂದ ಕಣ್ಣಿಗೆ ಏಟು ಬೀಳದಂತೆ ತರಗು ಬಿಡಿಸಬೇಕು. ಆನಂತರ ಮೂರು ಗಿಣ್ಣಿಗೊಂದರಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಬ್ಬು

ಕತ್ತರಿಸಿ ತುಂಡು ಮಾಡುತ್ತಾರೆ. ಇದನ್ನು ಹೊಡೆದ ಸಾಲು ಗಳಲ್ಲಿ ತುದಿ ಮೇಲೆ ಬರುವಂತೆ ಹಾಕುತ್ತಾರೆ. ಮಣ್ಣು ಏರು ಹಾಕುತ್ತಾರೆ. ಆನಂತರ ನೀರು ಹಾಯಿಸುತ್ತಾರೆ. ಆದರೆ ಗದ್ದೆ ಯಲ್ಲಿ ನೀರು ನಿಲ್ಲಿಸುವುದಿಲ್ಲ. ಸಾಲಿನ ಬದಲು ಎರಡೂ ಕಡೆಯೂ ಒಂದೂವರೆ ಅಡಿ ಅಂತರ ಬಿಟ್ಟು ಗುಣಿ ಮಾಡಿ ನೆಡುವ ಪದ್ಧತಿಯೂ ಉಂಟು. ಬಾವಿ ಮತ್ತು ಮಳೆ ನೀರಿನಿಂದ ಬೆಳೆಯುವ ಕಬ್ಬಿಗೆ ಮಾತ್ರ ಹೀಗೆ ಮಾಡುತ್ತಾರೆ. ಗುಣಿಕಬ್ಬಿಗೆ ನೀರು ಹಾಯಿಸುವುದಿಲ್ಲ. ನಾಲ್ಕೈದು ಗದ್ದೆಗಳಲ್ಲಿ ತಂದು ಸುರಿಯು

Sri Vidyabharathi Research Centre, Shringeri

CC-O. In Public Domain. Digitized by eGangotri

ತ್ತಾರೆ. ನೀರಾವರಿ ಯೋಜನೆಗಳಲ್ಲಿ ಎಲ್ಲಾ ಕಾಲದಲ್ಲಿಯೂ ಕಬ್ಬು ನೆಡುತ್ತಾರೆ. ಕಾರ್ಖಾನೆಗೆ ಕೊಡುವವರು ಆದನ್ನನು ಸರಿಸಿ ನೆಡುತ್ತಾರೆ. ಗ್ರಾಮಾಂತರದ ಮಳೆ ಮತ್ತು ಬಾವಿಯವರು ಮಾರ್ಚ್, ಏಪ್ರಿಲ್ ತಿಂಗಳಲ್ಲಿ ನೆಡುತ್ತಾರೆ.

ನೆಟ್ಟ ಕಬ್ಬು ಕ್ರಮೇಣವಾಗಿ ಕಣ್ಣೊಡೆದು ಎಲೆಯಾಗುತ್ತದೆ. ಮೊದಮೊದಲು ಕೊತ್ತಿನಿಂದ ಕುಕ್ಕೆ ಕಳೆ ತೆಗೆದು ನೆಲವನ್ನು ಪುಸಿಯಾಗಿಸುತ್ತಾರೆ. ಆದು ಚೆನ್ನಾಗಿ ಬೇರು ಬಿಟ್ಟ ನಂತರ ಎತ್ತುಕಟ್ಟಿ ಉದ್ದ ಮತ್ತು ಆಡ್ಡವಾಗಿ ಮಣ್ಣು ಹುಡಿ ಬೀಳುವಂತೆ ಉಳುತ್ತಾರೆ. ಕಡೆಯ ಪಕ್ಷ ಎರಡು ಬಾರಿ ಕಬ್ಬಿಗೆ ಮೇಲುಗೊಬ್ಬರ ಕೊಡುತ್ತಾರೆ. ಈಗ ರಸಾಯನಿಕ ಗೊಬ್ಬರಗಳ ಯುಗವಾದುದರಿಂದ ಮೂರು ನಾಲ್ಕು ಬಾರಿಯೂ ಕೊಡುತ್ತಾರೆ. ಕಬ್ಬು ಚೆನ್ನಾಗಿ ಒಡೆದು ಎರಡು ಮೂರು ಆಡಿ ಬೆಳೆದು ಗರಿಗೂಡುತ್ತದೆ. ಅನಂತರ ಯಾವ ವ್ಯವಸಾಯವೂ ಇಲ್ಲ. ಕಬ್ಬನ್ನು ಸಾಮಾನ್ಯವಾಗಿ ಹತ್ತು ತಿಂಗಳಿಂದ ಒಂದು ವರ್ಷದೊಳಗೆ ಕಟಾವು ಮಾಡುತ್ತಾರೆ. ಕಬ್ಬಿನಲ್ಲಿ ಚೇಣಿಕಬ್ಬು. ನೊಗೆ ಚೇಣಿ, ಮೊರಿಸ್, ಪಟಾವಳಿ ಎಂದಿರುತ್ತಿದ್ದುವು. ಈಗ ಸುಧಾರಿತ ತಳಿಗಳು ಅನೇಕ ಬಂದಿವೆ.

ಹತ್ತಿ

ಇದೊಂದು ಪ್ರಮುಖ ವಾಣಿಜ್ಯ ಬೆಳೆ. ಕರ್ನಾಟಕದಲ್ಲಿ ಹತ್ತು ಲಕ್ಷ ಹೆಕ್ಟೇರುಗಳಲ್ಲಿ ಹತ್ತಿ ಬೆಳೆಯುತ್ತದೆಂದು ತಿಳಿದು ಬರುತ್ತದೆ. ಉತ್ತರ ಕರ್ನಾಟಕದ ಮೈದಾನದಲ್ಲಿ ಇದು ಪ್ರಧಾನವಾಗಿ ಬೆಳೆಯುತ್ತದೆ. ಕಪ್ಪು ಎರೆಯ ನೆಲ ಹತ್ತಿಗೆ ಉತ್ಕೃಷ್ಟವಾದ ಜಾಗ. ಚಿತ್ರದುರ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ಬಿಟ್ಟರೆ ಹಳೇಮೈಸೂರು ಭಾಗದಲ್ಲಿ ಹತ್ತಿ ಬೆಳೆಯುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri



ಹತ್ತಿ

ಕರ್ನಾಟಕದಲ್ಲಿ ಒಣ ಬೆಳೆ ನೀರಾವರಿ ಬೆಳೆಯಾಗಿಯೂ ಹತ್ತಿ ಬೆಳೆಯುತ್ತದೆ. ಒಣ ಬೆಳೆಯಾಗಿ ಜಯಧರ, ಲಕ್ಷ್ಮಿ, ಸುಯೋಧರ, ಪಿಸ್ಸರ್ನ್ ಮುಂತಾದುವು ಬೆಳೆಯುತ್ತವೆ. ನೀರಾವರಿಯಲ್ಲಿ ಮೈಸೂರು ವಿಜಯ, ಹಂಪಿ, ವಿನಾರ, ಸೀ ಐಲೆಂಡ್, ವರಲಕ್ಷ್ಮಿ, ಮುಂತಾದುವು ಬೆಳೆಯುತ್ತವೆ. ಉತ್ತಮ ತಳಿಗಳಿಂದ ಹೆಕ್ಟೇರಿಗೆ 40 ಕ್ವಿಂಟಾಲು ಹತ್ತಿ ಬೆಳೆಯುತ್ತಾರೆಂದು ತಿಳಿದುಬರುತ್ತದೆ.

ಭೂಮಿಯನ್ನು ಚೆನ್ನಾಗಿ ಉತ್ತು ಹದಮಾಡುತ್ತಾರೆ. ತಮಗೆ ಶಕ್ತಿ ಇರುವಂತೆ ಹಟ್ಟಿಯ ಮತ್ತು ರಸಾಯನಿಕ ಗೊಬ್ಬರ ಹಾಕುತ್ತಾರೆ. ಮಣ್ಣು ಮೃದುವಾಗುವವರೆಗೆ ಉತ್ತು ಗೊಬ್ಬರ ಹಾಕಿದ ಭೂಮಿಗೆ ಹದವಿರುವಾಗ ಬೀಜ ನೆಡುತ್ತಾರೆ. ಹತ್ತಿ ಕುರುಚಲು ಗಿಡದ ಜಾತಿಯಾದುದರಿಂದ ಆದು ಬೇಗ ಬೆಳೆದು ಮೇಲಿರುತ್ತದೆ. ಆದುದರಿಂದ ಸಾಮಾನ್ಯ ಕಳೆಗೆ ಆದು ಹೆದರುವುದಿಲ್ಲ. ಗಿಡ ಸಣ್ಣದಾಗಿದ್ದಾಗ ಆಗೆದು ಕಳೆ ತೆಗೆಯುತ್ತಾರೆ. ಆಮೇಲೆ ಉತ್ತು ಮಣ್ಣು ಹೊಡಬಳಿಸುತ್ತಾರೆ. ಮೇಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಗೊಬ್ಬರವನ್ನು ಕೊಡುವುದುಂಟು. ಹತ್ತಿಯ ಗಿಡ ಹೂ ಬಿಡ ಲಾರಂಭಿಸಿದ ಮೇಲೆ ವ್ಯವಸಾಯ ನಿಲ್ಲುತ್ತದೆ. ಹೂವೂ ಕಾಯಾಗಿ ಅದು ಮಾಗಿ ಒಡೆದು ಬಿಳಿಯ ಹತ್ತಿ ಹೊರ ಚಾಚಿ ದಾಗ ಅದನ್ನು ಬಿಡಿಸಿ ತರುತ್ತಾರೆ. ಮುಂದೆ ಅದು ಭಾಗ ವಿಭಾಗಗಳಾಗಿ ಮಾರುಕಟ್ಟೆಗೆ ಹೋಗುತ್ತದೆ.

ಹೊಗೆಸೊಪ್ಪು

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಸಾಮಾನ್ಯವಾಗಿ ಬೆಳೆಯುತ್ತದೆ. ಎಲೆಗಳಲ್ಲಿ ಮಾದಕ ವಸ್ತು ಕೂಡಿಕೊಳ್ಳುವ ಜಾತಿಯ ಗಿಡ. ಮೂರು ಅಡಿ ಎತ್ತರದವರೆಗೆ ಬೆಳೆಯುತ್ತದೆ. ಆಗಲವೂ ಉದ್ದವೂ ಆದ ಎಲೆಗಳಿರುತ್ತದೆ. ಈ ಎಲೆಗಳು ಹಣ್ಣಾದಾಗ ಅಂದರೆ ಹಳದಿ ಬಣ್ಣಕ್ಕೆ ತಿರುಗಿದಾಗ ಎಲೆಯ ಮೇಲೆ ಒಂದು ರೀತಿಯ ಅಂಟುದ್ರವ ಉತ್ಪತ್ತಿಯಾಗುತ್ತದೆ. ಅಂತಹ ಎಲೆಗಳನ್ನು ಕಿತ್ತು ಹದಮಾಡುವ ಮನೆಗಳಲ್ಲಿ ನೇತು ಹಾಕಿ ಶಾಖಕೊಡುತ್ತಾರೆ. ಅದು ಕ್ರಮೇಣವಾಗಿ ಸುರುಳಿಯಾಗಿ ಎಸಳಾಗುತ್ತದೆ. ಬೀಡಿ, ಸಿಗರೇಟುಗಳಿಗೆ ಇದನ್ನು ಪುಡಿಮಾಡಿ ತುಂಬಿರುತ್ತಾರೆ. ಕರ್ನಾಟಕದಲ್ಲಿ ಮೈಸೂರು ಜಿಲ್ಲೆಯ ಹುಣ ಸೂರು, ಪಿರಿಯಾಪಟ್ಟಣ, ಮಂಡ್ಯದ ಮಳವಳ್ಳಿ, ಬೆಂಗಳೂರಿನ ರಾಮನಗರ ಮುಂತಾದ ಕಡೆಗಳಲ್ಲಿ ಅಪಾರವಾಗಿ ಬೆಳೆಯು ತ್ತದೆ. ಈಗ ಹೊಗೆಸೊಪ್ಪು ಕೇಂದ್ರ ಅಬ್ಕಾರಿ ಇಲಾಖೆಗೆ ಸೇರಿದೆ. ಪೂರ್ವ ಅನುಮತಿ ಇಲ್ಲದೆ ರೈತರು ಅದನ್ನು ಬೆಳೆಯುವಂತಿಲ್ಲ. ಆದುದರಿಂದ ಈ ಬೆಳೆ ಎಷ್ಟೋ ಕಡಿಮೆಯಾಗಿದೆ.

ಮುಂಗಾರಿನಲ್ಲಿಯೇ ಇದರ ಬೇಸಾಯ ಆರಂಭವಾಗು ತ್ತದೆ. ಮೊದಲು ಬೀಜವನ್ನು ಒಟ್ಟಲು ಹಾಕುತ್ತಾರೆ. ಹೊಗೆ ಸೊಪ್ಪು ಬೆಳೆಯಲು ನಿರ್ಧರಿಸಿದ ಭೂಮಿಯನ್ನು ಚೆನ್ನಾಗಿ

Sri Vidyabharathi Book Centre, Sringeri

CC-0. In Public Domain. Digitized by eGangotri

ಉತ್ತು ಪುಡಿಮಾಡುತ್ತಾರೆ. ಕೆಲವು ವೇಳೆ ಊರ ಹತ್ತಿರದ ಹೊಲಗಳಲ್ಲಿ ಈ ಬೆಳೆಯನ್ನು ಬೆಳೆಯುತ್ತಾರೆ. ಅಂತಹ ಕಡೆ ಅತಿಯಾಗಿ ಗೊಬ್ಬರ ಹಾಕುವ ಪ್ರಮೇಯ ಇರುವುದಿಲ್ಲ. ದೂರದ ಹೊಲಗಳಿಗೆ ಹಾಕಿದಾಗ ಗೊಬ್ಬರವನ್ನು ಹಾಕಬೇಕಾಗುತ್ತದೆ. ಒಟ್ಟಿನಲ್ಲಿ ಸಸಿ ಚೆನ್ನಾಗಿ ಬೆಳೆದ ಮೇಲೆ ಮಳೆ ಬಿದ್ದ ದಿನ ಸಾಲು ಹೊಡೆದು ನೆಡುತ್ತಾರೆ. ಪ್ರತಿ ಗುಣಿಗೂ ಎಲ್ಲಾ ಕಡೆಯೂ ಎರಡು ಅಡಿಗಿಂತ ಹೆಚ್ಚು ಜಾಗ ಬಿಡುತ್ತಾರೆ. ಮಳೆ ಬೀಳದಿದ್ದರೆ ನೀರು ಹುಯ್ದು ನೆಡುವುದೂ ಉಂಟು. ಸಸಿಯನ್ನು ನೆಟ್ಟ ನಂತರ ಬೆಳೆಯುವ ಕಳೆ ತೆಗೆಯುತ್ತಾರೆ. ಆಗಾಗ ಆಗೆದು ಮಣ್ಣು ಪುಡಿಯಾಗಿರುವಂತೆ ಮಾಡುತ್ತಾರೆ.ಮುಂಗಾರಿನಲ್ಲಿ ಅಂದರೆ ಜೂನ್ ತಿಂಗಳಲ್ಲಿ ಹೊಗೆಸೊಪ್ಪಿನ ಸಸಿ ನೆಡುತ್ತಾರೆ. ಚಳಿಗಾಳದಲ್ಲಿ ಬೀಳುವ ಇಬ್ಬನಿಯಿಂದ ಇದರ ಎಲೆಗಳು ಅಂಟುದ್ರವವನ್ನು ಮಾಡಿಕೊಳ್ಳುತ್ತವೆ. ಜನವರಿಯ ಹೊತ್ತಿಗೆ ಎಲೆ ಹಣ್ಣಾಗಲು ಆರಂಭಿಸುತ್ತವೆ.ಆವುಗಳನ್ನು ಕಿತ್ತು ಹದಮಾಡುವ ಮನೆಗೆ ಕಳಿಸುತ್ತಾರೆ. ಮುಂದೆ ಆದು ಬೇರೆಯ ರೀತಿಯಲ್ಲಿ ಕೆಲಸ ನಡೆಯುತ್ತದೆ. ಹೊಗೆಸೊಪ್ಪು ಸಾಮಾನ್ಯವಾಗಿ ಒಣಬೆಳೆ ಮತ್ತು ಎಲ್ಲಾ ಕಡೆಯೂ ಬೆಳೆಯುತ್ತದೆ.

ಹಿಪ್ಪನೇರಿಳೆ

ರೇಷ್ಮೆ ಸಾಕಣೆಯಲ್ಲಿ ಇದರದು ಪ್ರಮುಖ ಪಾತ್ರ. ಆದುದರಿಂದ ಇದನ್ನು ರೇಷ್ಮೆ ಬೆಳೆ ಎಂದೇ ಕರೆಯುತ್ತಾರೆ.ಹಿಪ್ಪು ನೇರಿಳೆ ಆರಳಿ ಎಲೆಯಂತಹ ಎಲೆಯುಳ್ಳ ಐದು ಅಡಿಯವರೆಗೆ ಬೆಳೆಯುವ ಗಿಡ. ಇದರ ಎಲೆಯನ್ನು ರೇಷ್ಮೆ ಹುಳುಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ. ಕರ್ನಾಟಕದ ಕೊಳ್ಳೇಗಾಲ, ಮಳವಳ್ಳಿ, ರಾಮನಗರ ಮುಂತಾದ ಕಡೆ ಇದು ವ್ಯಾಪಕ

Sri Vidyabharathi Book Centre, Sringeri

CC-O. In Public Domain. Digitized by eGangotri



ಹಿಪ್ಪನೇರಳೆ ತೋಟ

Sri Vidyabharathi Book Centre, Sringeri

CC-0. In Public Domain. Digitized by eGangotri

ವಾಗಿದೆ. ಈಗ ಸರ್ಕಾರದ ಪ್ರೋತ್ಸಾಹವಿರುವುದರಿಂದ ಎಲ್ಲಾ ಕಡೆಗಳಲ್ಲಿಯೂ ರೇಷ್ಮೆ ಸಾಕಣೆ ಜಾರಿಗೆ ಬರುತ್ತದೆ. ಹೆನ್ನಪಟ್ಟಣ ಮತ್ತು ರಾಮನಗರ, ಕನಕಪುರಗಳಲ್ಲಿ ಮಾರುಕಟ್ಟೆಗಳೇ ಇವೆ.

ನೀರಾವರಿಯ ಅನುಕೂಲವಿರುವ ಹೊಲ ಅಥವಾ ಗದ್ದೆಯಲ್ಲಿ ಹಿಪ್ಪನೇರಿಳೆ ಬೆಳೆಯುತ್ತದೆ. ಮಳೆಗಾಲದಲ್ಲಿ ಮಾತ್ರ ಹೊಲಗಳಲ್ಲಿಯೂ ಬೆಳೆಯುತ್ತದೆ. ಮೂರು ನಾಲ್ಕು ಅಂಗುಲ ಉದ್ದದ ಬಲಿತ ಕಡ್ಡಿಗಳನ್ನು ಸಾಲಾಗಿ ನೆಡುತ್ತಾರೆ. ನೆಡುವ ಜಾಗವನ್ನು ಉತ್ತು ಸಾಧ್ಯವಾದಷ್ಟು ಗೊಬ್ಬರ ಹಾಕಿರುತ್ತಾರೆ. ಕಡ್ಡಿ ನೆಟ್ಟ ಮೇಲೆ ನೀರು ಹಾಯಿಸುತ್ತಾರೆ. ಕಡ್ಡಿ ಚಿಗಿತು ಬೇರೂರಿ ಎಲೆಯೊಡೆಯುತ್ತದೆ. ಆದು ಚೆನ್ನಾಗಿ ಬೆಳೆದು ಸೊಪ್ಪುಕೊಡಲು ಆರು ತಿಂಗಳಾದರೂ ಬೇಕು. ಅನಂತರ ಸೊಪ್ಪಿನ ಮೊತ್ತವನ್ನು ಗಮನದಲ್ಲಿಟ್ಟುಕೊಂಡು ಹುಳು ಸಾಕುತ್ತಾರೆ. ಕ್ರಮವಾಗಿ ಒಂದು ಕಡೆಯಿಂದ ಸೊಪ್ಪು ಕತ್ತರಿಸಿ ತರುತ್ತಾರೆ. ಮತ್ತೆ ಗೊಬ್ಬರ ನೀರು ಹಾಕುತ್ತಾರೆ. ಆದು ಮತ್ತೆ ಎಲೆಯೊಡೆಯುತ್ತದೆ. ಒಮ್ಮೆ ನೆಟ್ಟ ಈ ಬೆಳೆ ನೀರು, ಗೊಬ್ಬರವಿದ್ದರೆ ಅನೇಕ ವರ್ಷ ಬರುತ್ತದೆ.

ಸಾಂಬಾರದ ಬೆಳೆಗಳು

ಸಾಂಬಾರ ಪದಾರ್ಥಗಳಿಗಾಗಿ ನಮ್ಮ ನಾಡಿಗೆ ಬಂದ ವ್ಯಾಪಾರಿಗಳಿಗೆ ಲೆಕ್ಕವಿಲ್ಲ. ಸಾವಿರಾರು ವರ್ಷಗಳಿಂದ ಭಾರತದ ಈ ಮಸಾಲೆಯ ವಸ್ತುಗಳು ದೇಶ ವಿದೇಶಗಳಲ್ಲಿ ಭಾರಿ ಬೇಡಿಕೆಯನ್ನು ಹೊಂದಿದ್ದುವು. ಇಂದಿಗೂ ಅವು ಅತ್ಯಂತ ಹೆಚ್ಚು ವಿದೇಶಿ ವಿನಿಮಯ ತರುತ್ತಿವೆ ಎಂದು ಹೇಳುತ್ತಾರೆ. ಅಂತಹವುಗಳಲ್ಲಿ ಏಲಕ್ಕಿ, ಮೆಣಸುಗಳು ತೋಟಗಾರಿಕೆಯಲ್ಲಿ

CC-0. Vidyaranya Book Centre, Sringeri

CC-O. In Public Domain. Digitized by eGangotri

ಬರುತ್ತವೆ. ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಸಾಂಬಾರ ಅಥವಾ ಧನಿಯಾ ಇವು ವ್ಯವಸಾಯದಲ್ಲಿ ಬರುತ್ತವೆ.

ಮೆಣಸಿನ ಕಾಯಿ

ಎರಡರಿಂದ ಮೂರು ಅಡಿಯ ಎತ್ತರಕ್ಕೆ ಬೆಳೆಯುವ ಗಿಡ. ಪೊದೆಯಾಕಾರವಾಗಿರುತ್ತದೆ. ಸುಮಾರು ಕಿರು ಬೆರಳಿ ಗಿಂತ ಸಣ್ಣವಾಗಿ ಉದ್ದವಾಗಿರುವ ಕಾಯಿ ಬಿಡುತ್ತದೆ. ಕಾಯಿ ಯಲ್ಲಿ ಹಸುರಾಗಿದ್ದು ಹಣ್ಣಾದಾಗ ಕೆಂಪಾಗಿರುತ್ತದೆ. ರುಚಿ ಯಲ್ಲಿ ಕಾರವಾಗಿರುತ್ತದೆ. ಸಾಮಾನ್ಯವಾಗಿ ಎಲ್ಲಾ ಅಡುಗೆಗೂ ಇದನ್ನು ಉಪಯೋಗಿಸುತ್ತಾರೆ. ಮೆಣಸಿನ ಕಾಯಿ ಉತ್ತರ ಕರ್ನಾಟಕ ಭಾಗದಲ್ಲಿ ಪ್ರಧಾನವಾಗಿಯೂ ದಕ್ಷಿಣ ಕರ್ನಾ ಟಕದ ಕಡೆ ಸಾಧಾರಣವಾಗಿಯೂ ಬೆಳೆಯುತ್ತದೆ. ಹಳೆಯ ಮೈಸೂರು ಭಾಗದಲ್ಲಿ ವ್ಯಾಪಾರಿ ದೃಷ್ಟಿಯಿಂದ ಮೆಣಸಿನ ಕಾಯಿ ಬೆಳೆಯುವುದಿಲ್ಲ. ಕೇವಲ ಮನೆ ಬಳಕೆಗೆ ಮಾತ್ರ ಬೆಳೆ ದುಕೊಳ್ಳುತ್ತಾರೆ.

ಮುಂಗಾರಿನಲ್ಲಿ ಒಟ್ಟಲು ಹಾಕುತ್ತಾರೆ. ಸುಮಾರು ಒಂದು ತಿಂಗಳ ಸಸಿಯನ್ನು ನೆಡುತ್ತಾರೆ. ಹಳೆಯ ಮೈಸೂರು ಭಾಗದಲ್ಲಿ ಮೆಣಸಿಗೆಯ ಹೊಲ ಎಂದು ಒಂದು ನಿರ್ದಿಷ್ಟವಾದ ಜಾಗವನ್ನೇ ಗೊತ್ತು ಮಾಡಿರುತ್ತಾರೆ. ಮೆಣಸಿಗೆಗೆ ಮಿಕ್ಕೆಲ್ಲಾ ಬೆಳೆಗಳಿಗಿಂತ ಹೆಚ್ಚು ಗೊಬ್ಬರಬೇಕು. ಆದುದರಿಂದ ಆ ಹೊಲಕ್ಕೆ ವಿಶೇಷವಾಗಿ ಗೊಬ್ಬರ ಹಾಕುತ್ತಾರೆ. ಒಟ್ಟಲು ಹಾಕಿದ ಮೇಲೆ ಮೆಣಸಿಗೆ ಹಾಕುವ ಹೊಲಗಳನ್ನು ಆಳವಾಗಿ ಉತ್ತು ಹುಡಿಗೆಡುವುತ್ತಾರೆ. ಇದರಿಂದ ಗೊಬ್ಬರ ಮತ್ತು ಮಣ್ಣು ಹದವಾಗಿ ಮಿಳಿತವಾಗುತ್ತವೆ. ಜೂನ್ ತಿಂಗಳಿನಲ್ಲಿ ಸಸಿಯನ್ನು ಕಿತ್ತು ನೆಡುತ್ತಾರೆ. ಈಗ ವಾತಾವರಣ ತಂಪಾಗಿರುವುದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೆಣಸಿನಕಾಯಿ

ಸಸಿಗಳು ಒಣಗುವುದಿಲ್ಲ. ಮೆಣಸಿಗೆಯನ್ನು ಉದ್ದ ಮತ್ತು ಅಗಲದಲ್ಲಿ ಎರಡು-ಎರಡೂವರೆ ಅಡಿ ಅಂತರದಲ್ಲಿ ಗುಣಿಮಾಡಿ ನೆಡುತ್ತಾರೆ. ನೆಟ್ಟು ಕೆಲವು ದಿನ ಗುಣಿಗೆ ನೀರು ಹಾಕುತ್ತಾರೆ. ಗಿಡ ಚೆನ್ನಾಗಿ ಬೇರು ಬಿಟ್ಟುಕೊಂಡಮೇಲೆ ಗುಣಿಗೆ ಹಣ್ಣು ಗೊಬ್ಬರ ಹಾಕಿ ಮಣ್ಣು ಮುಚ್ಚಿಬಿಡುತ್ತಾರೆ. ಮುಂದೆ ಗಿಡ ಮಳೆಯ ನೀರನ್ನಾಶ್ರಯಿಸಿಯೇ ಬೆಳೆಯುತ್ತದೆ.

ಸಸಿಗಳು ಬೇರುಬಿಟ್ಟು ಚೆನ್ನಾಗಿ ಆದಮೇಲೆ ನಾಲ್ಕು ಹಲ್ಲಿನ ಕುಂಟೆಯನ್ನು ಎರಡು ಕಡೆಯಿಂದಲೂ ಹೊಡೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಾರೆ. ಕಳೆ ಬೆಳೆದರೆ ಕಿತ್ತುಹಾಕಾತ್ತಾರೆ. ಕಡಿಮೆ ಬೆಳೆಯುವವರು ಕೊತ್ತಿನಿಂದ ಆಗೆಯುತ್ತಾರೆ. ಸಾಲುಗಳ ಮಧ್ಯೆ ಗೊಬ್ಬರ ಹಾಕುತ್ತಾರೆ. ಸೆಪ್ಟಂಬರ್ ಕೊನೆಯ ಹೊತ್ತಿಗೆ ಹೂವು, ಹೀಚು ಕಾಣಿಸುತ್ತವೆ. ಅಕ್ಟೋಬರ್ ತಿಂಗಳಿನಿಂದ ಕಾಯಿ ಬಲಿತು ಹಣ್ಣಾಗಲಾರಂಭಿಸುತ್ತದೆ. ಬಣ್ಣ ತಿರುಗಿದ ಹಣ್ಣನ್ನು ಬಿಡಿಸಿ ತಂದು ಕಣದಲ್ಲಿ ಆಥವಾ ಆರೆಗಳ ಮೇಲೆ, ಮನೆಯ ಮುಂದೆ ಚಾಪೆಗಳಲ್ಲಿ ಹರಡಿ ಒಣಗಿಸುತ್ತಾರೆ. ಆಮೇಲೆ ಚಾಪೆ ಪೆಟ್ಟಿಕಟ್ಟಿ ಇಡುತ್ತಾರೆ. ಮೆಣಸಿನಕಾಯಲ್ಲಿ ಸಣ್ಣಮೆಣಸಿನ ಕಾಯಿ, ದಪ್ಪಮೆಣಸಿನಕಾಯಿ, ಚುರುಕುಮೆಣಸಿನಕಾಯಿ ಎಂದು ಅನೇಕ ವಿಧಗಳಿವೆ.

ಈರುಳ್ಳಿ, ಬೆಳ್ಳುಳ್ಳಿ

ಸಾಂಬಾರ ಪದಾರ್ಥಗಳ ಸಾಲಿನಲ್ಲಿ ಇವೂ ಪ್ರಮುಖವಾದುವು. ಭೂಮಿಯೊಳಗೆ ಗೆಡ್ಡೆಕಟ್ಟುವ ಜಾತಿಯ ಸಸ್ಯವರ್ಗ. ವ್ಯಾಪಾರಿ ಮತ್ತು ಮನೆ ಬಳಕೆಯ ದೃಷ್ಟಿಯಿಂದ ಬೆಳೆಯುತ್ತಾರೆ. ಈರುಳ್ಳಿಯಲ್ಲಿ ಸಣ್ಣ ಈರುಳ್ಳಿ, ದಪ್ಪ ಈರುಳ್ಳಿ ಎಂದು ಎರಡುವಿಧ. ಗಾತ್ರದ ದೃಷ್ಟಿಯಿಂದ ಈ ಹೆಸರು ಬಂದಿದೆ. ಈರುಳ್ಳಿ, ಬೆಳ್ಳುಳ್ಳಿಗಳನ್ನು ವರ್ಷದಲ್ಲಿ ಎರಡು ಬಾರಿ ಬೆಳೆಯುತ್ತಾರೆ. ಮುಂಗಾರಿನಲ್ಲಿ ಜೂನ್ ತಿಂಗಳಲ್ಲಿ ನೆಡುತ್ತಾರೆ. ಮತ್ತೊಂದು ಬೇಸಿಗೆಯಲ್ಲಿ ಬರುವಂತೆ ಡಿಸೆಂಬರ್ ಜನವರಿಯಲ್ಲಿ ನೆಡುತ್ತಾರೆ. ಈರುಳ್ಳಿಗೆ ಹತ್ತಿರದಲ್ಲಿ ನೀರಿರುವ ಜಾಗ ಆಗಬೇಕು. ಒಣ ಬೆಳೆಯಾದರೂ ಆಗಾಗ ನೀರು ಬೇಕಾಗುತ್ತದೆ. ಹೊಲ ಅಥವಾ ಗದ್ದೆಯನ್ನು ಚೆನ್ನಾಗಿ ಉತ್ತು ಮೂರು ನಾಲ್ಕು ಅಡಿ ಅಗಲದ ಸಾಲುಗಳಲ್ಲಿ ಮಡಿ ಮಾಡುತ್ತಾರೆ. ಹಣ್ಣುಗೊಬ್ಬರ ಸಾಕಷ್ಟಾಗುತ್ತದೆ. ಈರುಳ್ಳಿ, ಬೆಳ್ಳುಳ್ಳಿ

CC-O. Jangamwadi Math Collection. Digitized by eGangotri

CC-O. In Public Domain. Digitized by eGangotri



ಈರುಳ್ಳಿ

ನೆಡುತ್ತಾರೆ. ಸಣ್ಣ ಈರುಳ್ಳಿಯಾದರೆ ಹಾಗೆಯೇ ನೆಡುತ್ತಾರೆ. ದಪ್ಪ ಈರುಳ್ಳಿಯಾದರೆ ಅದಕ್ಕೆ ಬೀಜವಿರುತ್ತಿದೆ; ಅದನ್ನು ಹಾಕುತ್ತಾರೆ. ಬೆಳ್ಳುಳ್ಳಿಯನ್ನು ಹಿಲುಕಾಗಿ ಒಡೆದು ನೆಡುತ್ತಾರೆ. ದಿನ ಬಿಟ್ಟು ದಿನ ನೀರು ಹಾಕಬೇಕು. ಹೆಚ್ಚು ಬೆಳೆಯುವವರು ಅತ ಹಾಕಿ ನೀರೆತ್ತುತ್ತಾರೆ. ಕಡಿಮೆ ಬೆಳೆಯುವವರು ಗಡಿಗೆ ಗಳಲ್ಲಿ ನೀರು ತಂದು ಹಾಕುತ್ತಾರೆ. ಈರುಳ್ಳಿ ಮೂರು ತಿಂಗ ಳೊಳಗೆ ಕೀಳಲು ಬರುತ್ತದೆ. ಬೆಳ್ಳುಳ್ಳಿ ಅದಕ್ಕಿಂತ ಸ್ವಲ್ಪ ತಡ ವಾಗುತ್ತದೆ.

ಸಂಬಾರ ಅಥವಾ ಧನಿಯಾ

ಸಣ್ಣ ಎಲೆಯ ಅರ್ಧ ಅಡಿ ಎತ್ತರದ ಗಿಡ. ಅದರಲ್ಲಿ ಸಣ್ಣ ಸಣ್ಣ ಕಾಳುಗಳು. ಇದೇ ಧನಿಯಾ ಅಥವಾ ಸಂಬಾರ. ಇದು ಎಲ್ಲಾ ಖಾರಾ ಮಸಾಲೆಯಲ್ಲಿಯೂ ಇದ್ದೇ ತೀರುತ್ತದೆ. ಮಾಂಸದ ಅಡುಗೆಯಲ್ಲಿಯಂತೂ ಅದಿಲ್ಲದೆ ನಡೆಯುವಂತಿಲ್ಲ. ಆದುದರಿಂದಲೇ 'ಕ್ಕೋಳಿ ಕೇಳಿ ಸಂಬಾರ ಆರೆದಾರೆ' ಎಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತು ಜಾರಿಯಲ್ಲಿದೆ. ಧನಿಯಾ ಗಿಡದ ಎಳೆಯ ಸೊಪ್ಪನ್ನು ಕೊತ್ತುಂಬರಿ ಸೊಪ್ಪು ಎಂದು ಅಡುಗೆಗೆ ಉಪಯೋಗಿಸು ತ್ತಾರೆ. ಆದುದರಿಂದ ಇದಕ್ಕೆ ಕೊತ್ತುಂಬರಿ ಬೀಜ ಎಂಬ ಮತ್ತೊಂದು ಹೆಸರೂ ಇದೆ.

ಸಂಬಾರದ ಬೆಳೆಯನ್ನು ಅಕ್ಟೋಬರ್ ತಿಂಗಳಿನಲ್ಲಿ ಹಾಕು ತ್ತಾರೆ. ಬೇಗ ಬತ್ತದ ಬೆಳೆ ಬಂದರೆ ಅವುಗಳನ್ನು ಉತ್ತು ಸಂಬಾರ ತಳಿಯುವುದುಂಟು. ಇದಕ್ಕೆ ಹೆಚ್ಚೇನೂ ವ್ಯವಸಾಯ ವಿರುವುದಿಲ್ಲ. ಪ್ರಧಾನ ಬೆಳೆಯಾಗಿ ಬೆಳೆಯುವ ಕಡೆ ಭೂಮಿ ಯನ್ನು ಚೆನ್ನಾಗಿ ಉತ್ತು ಹಸನುಮಾಡಿ ಗೊಬ್ಬರ ಹಾಕುತ್ತಾರೆ. ಅನಂತರ ಸಂಬಾರ ಬೀಜವನ್ನು ಬಿತ್ತುತ್ತಾರೆ. ಬಿತ್ತಿದ ಮೇಲೆ ಉತ್ತು ಸಾಲು ಸವರುತ್ತಾರೆ. ಹಲುಬೆ ಹೊಡೆಯುವುದೂ ಉಂಟು. ಕಡಲೆಯಂತೆ ಸಂಬಾರವೂ ಚಳಿಗಾಲದ ಬೆಳೆ. ಕಪ್ಪು ಎರೆಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಫೆಬ್ರುವರಿಯಲ್ಲಿ ಕಟಾ ವಿಗೆ ಬರುತ್ತದೆ. ಬಲಿತು ಮಾಗಿದ ಗಿಡವನ್ನು ಕಿತ್ತು ಒಣಗಿಸಿ ಬಡಿದು ಕಾಳು ಬೇರೆ ಮಾಡುತ್ತಾರೆ. ಈ ಭಾಗದಲ್ಲಿಯೇ ಬರುವ ಸಾಸುವೆ ಮತ್ತು ಜೀರಿಗೆಗಳೂ ಉಪ ಬೆಳೆಗಳಾಗಿ ಬೆಳೆಯುತ್ತವೆ. ಅವುಗಳಿಗಾಗಿಯೇ ಪ್ರತ್ಯೇಕವಾದ ವ್ಯವಸಾಯ ಪದ್ಧತಿಗಳೇನಿಲ್ಲ.

ಕರ್ನಾಟಕದ ವ್ಯವಸಾಯ ಪದ್ಧತಿ ಹಲವು ವೈವಿಧ್ಯ ಗಳಿಂದ ಕೂಡಿದೆ. ಇಲ್ಲಿ ನೀರಾವರಿ ಮತ್ತು ಒಣಭೂಮಿಯಲ್ಲಿ ಬೆಳೆಯುವ ಬೆಳೆ ಮತ್ತು ಅವುಗಳ ಪದ್ಧತಿಗಳನ್ನು ಸ್ಥೂಲವಾಗಿ ವಿವರಿಸಲಾಗಿವೆ. ಇವುಗಳಲ್ಲಿ ಇನ್ನೂ ಒಳ ಪದರಗಳಿರಬಹುದು. ಒಂದೆರಡು ಪ್ರಾದೇಶಿಕ ಭಿನ್ನತೆಗಳಿರಬಹುದು. ಅನೇಕ ವರ್ಷ ಬೇರೆ ಬೇರೆ ಭಾಷೆಯ ರಾಜ್ಯಗಳ ಅಧೀನದಲ್ಲಿದ್ದ ಕನ್ನಡ ಭಾಗ ಗಳಲ್ಲಿ ಅಲ್ಲಿನ ಹೆಸರುಗಳೂ ಸೇರಿರಬಹುದು. ಆದರೆ ಒಟ್ಟಿನಲ್ಲಿ ಇದೊಂದು ಏಕರೂಪದ ಅಧ್ಯಯನವೆನಿಸಿದೆ.

CC-O. Vasishtha Tripathi Collection, Sringeri